(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಉಪಾಧ್ಯಕ್ಷರೆ. ಮೈಸೂರು ಮುಕ್ತ ವಿಶ್ವವಿದ್ಯಾಲಯದ ಬಗ್ಗೆ ಮಾತನಾಡಬೇಕು.

ಉಪಾಧ್ಯಕ್ಷರು: ಮಾನ್ಯ ಪುಟ್ಟೇಗೌಡರೆ, ಒಂದು ನಿಮಿಷ. ಈಗ ಶ್ರೀ ಹೆಚ್.ಡಿ. ಬಸವರಾಜು ಅವರ ಗಮನ ಸೆಳೆಯುವ ಸೂಚನೆ ಇದೆ. ಅದು ಮುಗಿಯಲಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಉಪಾಧ್ಯಕ್ಷರೆ, ಅದು ಆದಮೇಲೆ ಮಾತನಾಡಲು ದಯಮಾಡಿ ನಮಗೆ ಅವಕಾಶವನ್ನು ಕೊಡಿ.

ಉಪಾಧ್ಯಕ್ಷರು : ಆಯಿತು. ಕೊಡುತ್ತೇನೆ.

7. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ : ಕೊಡಗು ಜಿಲ್ಲೆಯಲ್ಲಿ ಮಳೆಹಾನಿಯಿಂದ ರಸ್ತೆಗಳು ತೀವ್ರ ಹದಗೆಟ್ಟಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ ಸುರಿದಂಥ ಮಳೆಯಿಂದಾಗಿ ರಸ್ತೆಗಳಿಗೆ ಖಾಸಗಿ ಆಸ್ತಿಗಳಿಗೆ ಅತಿ ಹೆಚ್ಚಿನ ನಷ್ಟ ಸಂಭವಿಸಿದೆ. ಈ ಸಂದರ್ಭದಲ್ಲಿ ಸರ್ಕಾರದ ವತಿಯಿಂದ, ಆ ಪ್ರದೇಶಗಳಿಗೆ ಬೇಟಿ ನೀಡಿ ಆಗಿರುವಂತಹ ನಷ್ಟವನ್ನು, ಹಾಗು ಅದಕ್ಕೆ ಕೊಡಬೇಕಾಗಿರುವಂತಹ ಪರಿಹಾರವನ್ನು ಮತ್ತೆ ಪರಿಹಾರದ ಕೆಲಸವನ್ನು ಮಾಡಬೇಕಾದಂಥ ಸರ್ಕಾರಿ ಅಧಿಕಾರಿಗಳು ನಿಷ್ಕ್ರಿಯರಾಗಿ ಇದ್ದಾರೆ. ಇದರ ಬಗ್ಗೆ ನನ್ನ ಆರೋಪ ಇದೆ. ಇವತ್ತು ಸರ್ಕಾರ ಹಣವನ್ನು ಬಿಡುಗಡೆ ಮಾಡುವುದಕ್ಕೆ ಮತ್ತೆ ಮಾಡಿರುವಂತಹ ಹಣವನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರ ನೇಮಕ ಮಾಡಿರುವಂಥ ಅಧಿಕಾರಿಗಳು, ಕ್ರಮ ಕೈಗೊಳ್ಳದೇ ಇರುವುದರ ವಿರುದ್ಧ ನಾನು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಅದೇ ರೀತಿಯಲ್ಲಿ ಈ ನಷ್ಟಕ್ಕೆ ಸರ್ಕಾರವೂ ಕೂಡ ಹಣವನ್ನು ಹೆಚ್ಚಿನ ರೀತಿಯಲ್ಲಿ ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದೇನೆ. ಇವತ್ತು ಕೊಡಗು ಜಿಲ್ಲೆಯಲ್ಲಿ ಅಲ್ಲಿನ ಜನತೆ, ಈ ಬಗ್ಗೆ ನಾನು ಮಲೆನಾಡು ಎಂದು ಪೂರ್ಣವಾಗಿ ಹೇಳಬೇಕಾಗುತ್ತದೆ. ಅದು ದಕ್ಷಿಣ ಕನ್ನಡವಾಗಲಿ, ಚಿಕ್ಕಮಗಳೂರು ಆಗಲಿ, ಕೊಡಗು ಆಗಲಿ, ಈ ಭಾಗಗಳಲ್ಲಿ.....

ಉಪಾಧ್ಯಕ್ಷರು : ಮಾನ್ಯ ಹೆಚ್.ಡಿ. ಬಸವರಾಜ್‌ರವರೆ, ತಾವು ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಿರಿ, ಅನಂತರ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡುತ್ತಾರೆ. ಅನಂತರ ತಾವು ಉತ್ತರವನ್ನು ಕೇಳಿ, ಬೇಕಾದರೆ ಭಾಷಣವನ್ನು ಮಾಡಿ. ಈಗ ವಿಷಯಕ್ಕೆ ಸಂಬಂಧಪಟ್ಟಂತೆ ಗಮನವನ್ನು ಸೆಳೆಯಿರಿ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೆ, ತಮ್ಮ ಮುಖಾಂತರ ಟೋಕೋಪಯೋಗಿ ಸಚಿವರಲ್ಲಿ ಮಳೆ ಹಾನಿಯಿಂದ ಆದಂಥ ವ್ಯವಸ್ಥೆಯ ಬಗ್ಗೆ ಸರ್ಕಾರ

ಸರಿಯಾದ ಕ್ರಮವನ್ನು ತೆಗೆಮಕೊಂಡಿಲ್ಲ. ಹಣವನ್ನು ಸರಿಯಾದ ರೀತಿಯಲ್ಲಿ ಬಿಡುಗಡೆ ಮಾಡಿಲ್ಲವೆಂದು ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ, ಬಂದರು, ಇಂಧನ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಒಟ್ಟು ಮೂರು ತಾಲ್ಲೂಕುಗಳಿದ್ದು ತಾಲ್ಲೂಕುವಾರು ರಸ್ತೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(ಉದ್ದ ಕಿ.ಮೀ. ಗಳಲ್ಲಿ)

ಕ್ರ. ಸಂ.	ತಾಲ್ಲೂಕು	ರಾಜ್ಯ ಹೆದ್ದಾರಿ	ಜಿಲ್ಲಾ ಮುಖ್ಯ ರಸ್ತೆ	ಒಟ್ಟು
1	ಮಡಿಕೇರಿ	124.25	262.10	386.35
2	ಸೋಮವಾರ ಪೇಟೆ	233.00	214.00	447.00
3	ವಿರಾಜಪೇಟೆ	156.51	340.70	497.21
	ಒಟ್ಟು	513.76	799.00	1312.76

ಜಿಲ್ಲೆಯಲ್ಲಿನ ಒಟ್ಟು 513.76 ಕಿ.ಮೀ ರಾಜ್ಯ ಹೆದ್ದಾರಿಗಳ ಪೈಕಿ 401.00 ಕಿ.ಮೀ. ಉದ್ದದ ರಸ್ತೆಯ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ರೂ. 17.54 ಕೋಟಿ ಅಂದಾಜುಮೊತ್ತಕ್ಕೆ 3 ವರ್ಷಗಳ ಅವಧಿಗೆ 2005-08 ರವರೆಗೆ ಟೆಂಡರು ಮುಕಾಂತರ ಗುತ್ತಿಗೆದಾರರಿಗೆ ವಹಿಸಲಾಗಿರುತ್ತದೆ. ಇದುವರೆಗೆ ಒಟ್ಟು 97.10 ಕಿ.ಮೀ ಉದ್ದದ ರಸ್ತೆ ಮರು ಡಾಂಬರೀಕರಣವಾಗಿದ್ದು 237.90 ಕಿ.ಮೀ ಉದ್ದಕ್ಕೆ ಗುಂಡಿ ಮುಚ್ಚಲಾಗಿರುತ್ತದೆ. ಹಾಗೂ ಇದುವರೆಗೆ ರೂ. 3.80 ಕೋಟಿ ಪ್ರಗತಿಯಾಗಿರುತ್ತದೆ. ಪ್ರಗತಿಯಾದ ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ತಾಲ್ಲೂಕು	ಮರು ಡಾಂಬರೀಕರಣ ಮಾಡಬೇಕಾದ ಉದ್ದ ಕಿ.ಮೀ ಗಳಲ್ಲಿ	ಮರು ಡಾಂಬರೀಕರಣ ಮಾಡಿದ ಉದ್ದ ಕಿ.ಮೀ ಗಳಲ್ಲಿ	ಗುಂಡಿ ಮುಚ್ಚಬೇಕಾದ ಉದ್ದ ಕಿ.ಮೀ	ಗುಂಡಿ ಮುಚ್ಚಿರುವ ಉದ್ದ ಕಿ.ಮೀ
1	ಮಡಿಕೇರಿ	53.80	26.50	99.00	99.00
2	ಸೋಮವಾರ ಪೇಟೆ	110.06	38.55	168.60	91.90
3	ವಿರಾಜಪೇಟೆ	78.40	32.05	133.98	47.00
	ಒಟ್ಟು	242.26	97.10	401.58	237.90

ಒಟ್ಟು 6 ರಾಜ್ಯ ಹೆದ್ದಾರಿಗಳ ನಿರ್ವಹಣೆಯ ಪೈಕಿ ಕೊಣನೂರು ಮಾಕುಟ್ಟ ರಸ್ತೆಯ ಸೋಮವಾರಪೇಟೆ ತಾಲ್ಲೂಕು ವ್ಯಾಪ್ತಿಯ ಕಿ.ಮೀ. 9.60 ರಿಂದ 45.60 ಕಿ.ಮೀ. ವರೆಗೆ (ಶಿರಂಗಾಲದಿಂದ ಕೂಡಿಗೆ ವರೆಗೆ, ಗುಡ್ಡೆಹೊಸೂರುನಿಂದ ಒಂಟಿ ಅಂಗಡಿಯ ವರೆಗೆ) ಮತ್ತು

ವೀರಾಜಪೇಟೆ ತಾಲ್ಲೂಕು ವ್ಯಾಪ್ತಿಯ ಕಿ.ಮೀ 45.60 ರಿಂದ 90.10 ರವರೆಗಿನ ರಸ್ತೆಯ ಪೈಕಿ ಪೆರಂಬಾಡಿಯಿಂದ ಮಾಕುಟ್ಟದವರೆಗಿನ 20.10 ಕಿ.ಮೀ ಉದ್ದದ ರಸ್ತೆ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವುದರಿಂದ ಮತ್ತು ಈ ರಸ್ತೆಯ ತಳಪಾಯದ ಮಣ್ಣಿನ ಕ್ಷೇಮದಾರಣೆ ಸಾಮರ್ಥ್ಯ ಶೇಕಡ 3 ಕ್ಕಿಂತ ಕಡಿಮೆಯಿರುವುದರಿಂದ ರಸ್ತೆಯಲ್ಲಿ ಆಳವದ ಗುಂಡಿಗಳು, ಕೊರಕಲು ಆಗಿರುವುದರಿಂದ ರಸ್ತೆಯು ನಿರ್ವಹಿಸಲಾಗದ ಸ್ಥಿತಿಯಲ್ಲಿದ್ದು ರಸ್ತೆಯ ಪೂರ್ಣ ಉದ್ದವನ್ನು ಪುನರ್ ನಿರ್ಮಾಣ ಪರಿಶೀಲನೆಯಲ್ಲಿರುತ್ತದೆ. ಕೊಡಗು ಜಿಲ್ಲೆಯಲ್ಲಿನ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಕಾಮಗಾರಿಯನ್ನು ಗುತ್ತಿಗೆದಾರರು ಕೊಣನೂರು ಮಾಕುಟ ಹಾಗೂ ಮಡಿಕೇರಿ ಕುಟ್ಟ ಅಂತರ್ ರಾಜ್ಯ ಹೆದ್ದಾರಿಗಳ ಕಾಮಗಾರಿ ಸೇರಿದಂತೆ ನಿಧಾನ ಗತಿಯಲ್ಲಿ ಮುಂದುವರಿಸಿದ್ದು ಮಳೆಗಾಲಕ್ಕೆ ಮುಂಚಿತವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಿಲ್ಲ. ಗುತ್ತಿಗೆದಾರರ ಈ ವಿಳಂಬ ನೀತಿಗೆ ಇಲಾಖಾ ವತಿಯಿಂದ ನೋಟಿಸುಗಳನ್ನು ನೀಡಿದ್ದು ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಜಿಲ್ಲಾ ಮುಖ್ಯ ರಸ್ತೆಗಳು :

ಕೊಡಗು ಜಿಲ್ಲೆಯಲ್ಲಿ ಒಟ್ಟು 799 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳಿದ್ದು ಈ ರಸ್ತೆಗಳ ದುರಸ್ಥಿ ಹಾಗೂ ನಿರ್ವಹಣೆಗಾಗಿ 2005–06 ಸಾಲಿಗೆ ರೂ. 219.16 ಲಕ್ಷ ಅನುದಾನ ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಈ ರಸ್ತೆಗಳ ದುರಸ್ಥಿಯ ಪ್ರಗತಿ ಕೆಳಕಂಡಂತಿರುತ್ತದೆ.

ಕ್ರ. ಸಂ.	ತಾಲ್ಲೂಕು	ಒಟ್ಟು ಉದ್ದ ಕಿ.ಮೀ ಗಳಲ್ಲಿ	2005–06 ರಲ್ಲಿ ದುರಸ್ತಿಗೆ ನೀಡಿದೆ ಅನುದಾನ ರೂ. ಲಕ್ಷಗಳಲ್ಲಿ	2005–06 ರಲ್ಲಿ ದುರಸ್ತಿ ಮಾಡಲಾದ ರಸ್ತೆಯ ಉದ್ದ ಕಿ.ಮೀಗಳಲ್ಲಿ	ದುರಸ್ತಿಯಾಗದೆ ಬಾಕಿ ಇರುವ ಉದ್ದ ಕಿ.ಮೀ ಗಳಲ್ಲಿ
1	ಮಡಿಕೇರಿ	262.10	51.58	262.10	–
2	ಸೋಮವಾರ ಪೇಟೆ	214.00	41.58	214.00	–
3	ವಿರಾಜಪೇಟೆ	340.70	126.00	180.00	160.70
	ಒಟ್ಟು	799.00	219.16	656.10	160.70

ಒಟ್ಟು 799.00 ಕಿ.ಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳ ಪೈಕಿ 656.10 ಕಿ.ಮೀ. ಉದ್ದ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಗುಂಡಿ ಮುಚ್ಚಿ ದುರಸ್ಥಿ ಮಾಡಿ ನಿರ್ವಹಣೆ ಮಾಡಲಾಗಿರುತ್ತದೆ. ಬಾಕಿ ಉಳಿದ 160.70 ಕಿ.ಮೀ. ಉದ್ದವ ರಸ್ತೆಯು ವಿರಾಜಪೇಟೆ ತಾಲ್ಲೂಕಿನ ವ್ಯಾಪ್ತಿಗೆ ಸೇರಿದ್ದು ಈ ರಸ್ತೆಗಳ ದುರಸ್ಥಿ ಕಾಮಗಾರಿಗಳನ್ನು ವಿವಿಧ ಗುತ್ತಿಗೆದಾರರಿಗೆ ವಹಿಸಲಾಗಿದೆ. ಮತ್ತು ಕೆಲಸ ಪೂರ್ಣ

ಗೊಳಿಸಲು ಎಲ್ಲಾ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿನ 799.00 ಕಿ.ಮೀ ಉದ್ದದ ಜಿಲ್ಲಾಮುಖ್ಯ ರಸ್ತೆಗಳ ಪೈಕಿ 177.00 ಕಿ.ಮೀ ಉದ್ದದ ರಸ್ತೆಗಳು 2004–05ರ ಸಾಲಿನಲ್ಲಿ ಗ್ರಾಮೀಣ ರಸ್ತೆಗಳಿಂದ ಜಿಲ್ಲಾ ಮುಖ್ಯ ರಸ್ತೆಗಳಾಗಿ ಮೇಲ್ದರ್ಜೆಗೇರಿಸಿದ ರಸ್ತೆಗಳಾಗಿದ್ದು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಿಂದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಹಸ್ತಾಂತರ ಮಾಡುವಾಗ ತೀವ್ರವಾಗಿ ಹಾಳಾಗಿ ಗುಂಡಿ ಮುಚ್ಚಿ ದುರಸ್ಥಿಪಡಿಸಲು ಸಾಧ್ಯವಾಗದ ರೀತಿಯಲ್ಲಿ ಇರುತ್ತವೆ. ಈ ರಸ್ತೆಗಳ ಅಭಿವೃದ್ಧಿ ಹಾಗೂ ದುರಸ್ಥಿಗೆ ಪ್ರಸ್ತುತ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಎರಡು ವಿಷಯಗಳ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯಲು ಇಚ್ಛಿಪಡುತ್ತಿದ್ದೇನೆ. ಒಂದು ಮಳೆಯಿಂದ ಹಾನಿಯಾಗಿರುವಂಥಾದ್ದನ್ನು ಸರಿಪಡಿಸಲಿಕ್ಕೆ ಹೆಚ್ಚುವರಿಯಾಗಿ 10 ಕೋಟಿ ರೂಪಾಯಿಗಳ ಹಣವನ್ನು ಕೊಡಗು ಜಿಲ್ಲೆಗೆ ಬಿಡುಗಡೆ ಮಾಡಬೇಕು. ಸಮರೋಪಾದಿಯಲ್ಲಿ ಕೆಲಸಗಳನ್ನು ಪ್ರಾರಂಭ ಮಾಡಬೇಕು ಎನ್ನುವುದು ನನ್ನ ಮೊದಲನೆಯ ಆಗ್ರಹ. ಎರಡನೆಯ ಆಗ್ರಹವೆಂದರೆ, ತಾವು ನೀಡಿರುವ ಈ ಮಾಹಿತಿಯಲ್ಲಿ ಇರುವ ಬಹಳಷ್ಟು ಮಾಹಿತಿಗಳು ಸತ್ಯಕ್ಕೆ ದೂರವಾಗಿವೆ. ನೀವು ನೇಮಿಸಿದಂಥ ಅಧಿಕಾರಿಗಳು ಅಲ್ಲಿ ಕೆಲಸವನ್ನು ಮಾಡುತ್ತಿಲ್ಲ. ಅವರು ಕೆಲಸವನ್ನು ಮಾಡಿದ್ದರೆ.ಬಹುಶಃ ಈ ಮಳೆಗಾಲದಲ್ಲಿ ಇಷ್ಟು ಪ್ರಮಾಣದಲ್ಲಿ ಅಲ್ಲಿನ ರಸ್ತೆಗಳು ಹಾನಿಯಾಗುತ್ತಿರಲಿಲ್ಲ. ಮತ್ತೊಂದು ವಿಚಾರವನ್ನು ನಾನು ಇಲ್ಲಿ ಹೇಳಬೇಕಾಗಿದೆ. ಗಡಿ ಪ್ರದೇಶದಲ್ಲಿರುವ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ತಲೆತಗ್ಗಿಸುವಂಥ ವಿಚಾರವಿದು. ಮಾಕುಟದ ಮೂಲಕ ಕೇರಳ ರಾಜ್ಯವನ್ನು ತಲುಪುವಂಥ ಒಂದು ರಸ್ತೆ ನನ್ನ ಕ್ಷೇತ್ರದಲ್ಲಿ ಹಾದುಹೋಗುತ್ತದೆ. ಅಲ್ಲಿನ ರಸ್ತೆಯ ಪರಿಸ್ಥಿತಿಯನ್ನು ಗಮನಿಸಿದಂಥ ಸಾರಿಗೆ ವಾಹನಗಳನ್ನು ನಡೆಸುವಂಥ ಎಲ್ಲಾ ವಾಹಗಳ ಮಾಲೀಕರು, ಆ ರಸ್ತೆಯಲ್ಲಿ ನಾವು ಯಾವುದೇ ಕಾರಣಕ್ಕೂ ವಾಹನಗಳನ್ನು ಚಲಿಸುವಂಥ ವ್ಯವಸ್ಥೆಯನ್ನು ಮಾಡುವುದಿಲ್ಲ ಎನ್ನುವ ಉಗ್ರವಾದಂಥ ಪ್ರತಿಭಟನೆಯನ್ನು ಮಾಡಿದ್ದಾರೆ. ಆ ರಸ್ತೆ ಸರಿಯಿಲ್ಲದೇ ಇರುವುದರಿಂದ ಕೇರಳ ರಾಜ್ಯ ಸರ್ಕಾರವೂ ಕೂಡ ಆ ರಾಜ್ಯದ ರಸ್ತೆ ಸಾರಿಗೆ ಬಸ್ಸುಗಳನ್ನು ಆ ರಸ್ತೆಯಲ್ಲಿ ಓಡಿಸುವುದಿಲ್ಲ ಎನ್ನುವಂಥ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದು ನಿಜಕ್ಕೂ ತಲೆತಗ್ಗಿಸುವಂಥ ಒಂದು ವಿಚಾರವಾಗಿದೆ. ಆ ರಸ್ತೆಗಳ ಗುಣಮಟ್ಟ ಏನಿದೆ ಎಂದು ಹೇಳಿದ್ದಾರೆ. ಅದು ಎಷ್ಟು ವರ್ಷಗಳಿಂದ ಇದೆ ಎನ್ನುವುದು ಎಲ್ಲರಿಗೂ ತಿಳಿದಿರುವಂಥ ವಿಚಾರ. ಈ ವಿಚಾರದಲ್ಲಿ ಅಧಿಕಾರಿಗಳು ಅಲ್ಲಿ ಏನು ಮಾಡುತ್ತಿದ್ದಾರೆ? ಆ ರಸ್ತೆಗಳನ್ನು ಸರಿಪಡಿಸಬೇಕು ಎಂದು ಕಾಮಗಾರಿಯನ್ನು ಗುತ್ತಿಗೆದಾರರು ಎಷ್ಟು ಆರಾಮವಾಗಿದ್ದಾರೆ ಎಂದರೆ, ಕಳೆದ ಸೆಪ್ಟೆಂಬರ್‌ನಲ್ಲಿ ಅವರು 11 ತಿಂಗಳು ಗುತ್ತಿಗೆದಾರರಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಅವರು ಅಗ್ರಿಮೆಂಟಿನಲ್ಲಿ ಸೈನ್ ಮಾಡುತ್ತಾರೆ. ಆದರೆ ಅವರು ಹಾಗೆ ಮಹಿಸಿಕೊಂಡಂಥ ಕೆಲಸದಲ್ಲಿ ಇದುವರೆಗೆ 20 ಭಾಗವೂ ಪ್ರಗತಿಯಾಗಿರುವುದಿಲ್ಲ.

ಇಷ್ಟು ತಿಂಗಳಾದರು 20 ಭಾಗವನ್ನೂ ಪ್ರಗತಿ ಮಾಡದೇ ಇರುವಂಥವರು ಇನ್ನುಳಿದ 2–3 ತಿಂಗಳುಗಳಲ್ಲಿ 80 ಭಾಗ ಪ್ರಗತಿಯನ್ನು ತೋರಿಸುವರೇ? ಆ ಬಗ್ಗೆ ಸವಿವರವಾದ ಚರ್ಚೆಯನ್ನು ಮಾಡಿದರೆ ಒಳ್ಳೆಯದು. ಆ ಭಾಗದಲ್ಲಿರುವಂಥ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ರವರಾಗಲೀ, ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಾಗಲೀ ಸರಿಯಾದಂಥ ರೀತಿಯಲ್ಲಿ ಪ್ರತಿಕ್ರಿಯೆ ಕೊಡಲಿಲ್ಲ, ಸ್ಪಂದನ ಮಾಡಲಿಲ್ಲ. ಅವರ ಜೊತೆ ನಾನು ಬಹಳಷ್ಟು ಬಾರಿ ಹೋರಾಟ ಮಾಡಿದರೂ ಕೂಡ ಯಾವುದೇ ಫಲ ಸಿಗಲಿಲ್ಲ. ಕೊನೆಗೆ, ಸರ್ಕಾರಕ್ಕೆ ಮೊರೆಯಿಟ್ಟು ಅವರನ್ನು ವರ್ಗಾವಣೆ ಮಾಡಬೇಕೆಂದು ಕೇಳಿಕೊಂಡಾಗ ಸರ್ಕಾರ ವರ್ಗಾವಣೆ ಆದೇಶವನ್ನು ಹೊರಡಿಸಿತು. ಆದರೆ ದುರ್ದೈವವೆಂದರೆ, ಆ ವ್ಯಕ್ತಿ ಕೆ.ಎ.ಟಿ.ಗೆ ಹೋಗಿ ಅದರ ವಿರುದ್ಧ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಆ ಸ್ಟೇಯನ್ನು ತೆರವುಗೊಳಿಸುವಂಥ ಕೆಲಸವನ್ನು ಇವತ್ತು ನಮ್ಮ ಅಧಿಕಾರಿಗಳು ಮಾಡುತ್ತಿಲ್ಲ. ಹೀಗಾಗಿ ನನಗೊಂದು ಸಂದೇಹ ಬರುತ್ತಿದೆ. ಈ ಅಧಿಕಾರಿಗಳೇನಾದರೂ ತಮ್ಮ ತಮ್ಮಲ್ಲೇ ವ್ಯವಸ್ಥೆ ಮಾಡಿಕೊಂಡು ಶಾಮೀಲಾಗಿದ್ದಾರೆಯೇ ಎನ್ನುವ ಸಂಶಯ ಬರುತ್ತಿದೆ. ಸರ್ಕಾರದ ಆದೇಶದ ವಿರುದ್ಧ ಕೆ.ಎ.ಟಿ.ಯಿಂದ ಸ್ಟೇ ತೆಗೆದುಕೊಂಡು ಬಂದಿದ್ದರೆ, ಆ ಸ್ಟೇಯನ್ನು ತೆರವುಗೊಳಿಸಲಿಕ್ಕೆ ಸಾಧ್ಯವಾಗುವುದಿಲ್ಲವೇ? ಏಕೆ ಇವರು ಸುಮ್ಮನಿದ್ದಾರೆ? ಇದರ ಬಗ್ಗೆ ಕೂಡ ನಾನು ಕಳೆದ ಎರಡು ವರ್ಷಗಳಿಂದ ನಮ್ಮ ಕಾರ್ಯದರ್ಶಿಗಳಲ್ಲಿ ಮನವಿ ಮಾಡುತ್ತಿದ್ದೇನೆ. ಆ ಭಾಗದ ರಸ್ತೆ ತೀರ ಅಧ್ವಾನವಾದಂಥ ಸ್ಥಿತಿಯಲ್ಲಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುವುದಿಲ್ಲ. ದಯವಿಟ್ಟು ಒಮ್ಮೆ ನೀವು ಆ ರಸ್ತೆಯ ವೀಕ್ಷಣೆಯನ್ನು ಮಾಡಿ, ಅದನ್ನು ಸರಿಪಡಿಸಿ ಎಂದು ಕಾರ್ಯದರ್ಶಿಯವರಿಲ್ಲಿ ಮನವಿ ಮಾಡಿದರೂ ಅವರಿಂದಲೂ ಅದಕ್ಕೆ ಸೂಕ್ತ ಸ್ಪಂದನ ಸಿಗಲಿಲ್ಲ. ಈಗ ನಾನು ಯಾರಲ್ಲಿ ಮೊರೆಹೋಗಬೇಕಾಗಿದೆ ಎನ್ನುವುದು ಗೊತ್ತಿಲ್ಲ. ಆ ರಸ್ತೆಗಳನ್ನು ಸರಿಪಡಿಸಲು ಸರ್ಕಾರ ಗುತ್ತಿಗೆ ಕೊಟ್ಟಿಲ್ಲ ಎಂದೇನೂ ಅಲ್ಲ, ಸರ್ಕಾರ ಗುತ್ತಿಗೆಯನ್ನು ಕೊಟ್ಟಿದೆ. ಸರಿಯಾದಂಥ ಹಣವನ್ನು ಮಂಜೂರಾತಿ ಮಾಡಿದೆ. ಆದರೆ ಆ ಭಾಗದಲ್ಲಿ ಕೆಲಸ ನಿರ್ವಹಿಸಬೇಕಾದಂಥ ಅಧಿಕಾರಿಗಳು ಸಂಪೂರ್ಣವಾಗಿ ನಿಷ್ಕ್ರಿಯರಾಗಿದ್ದಾರೆ. ಈ ಸರ್ಕಾರ ಬಂದಮೇಲೆ ಕೇವಲ 6 ಕಿ.ಮೀ. ರಸ್ತೆಯ ಮರು ಡಾಂಬರೀಕರಣಕ್ಕೋಸ್ಕರ ನಾನು ಮೂರು ದಿವಸ ಆಹೋರಾತ್ರಿ ಧರಣಿ ಮಾಡಬೇಕಾಯಿತು. ಅಷ್ಟರಮಟ್ಟಿಗೆ ಅಲ್ಲಿನ ಅಧಿಕಾರಿಗಳು ನಿಷ್ಕ್ರಿಯರಾಗಿದ್ದಾರೆ. ಕೆಲವು ರಾಜಕಾರಣಿಗಳ ಜೊತೆ ಕೈಗೋಡಿಸಿಕೊಂಡು, ಈ ಸರ್ಕಾರಕ್ಕೆ ಕೆಟ್ಟ ಹೆಸರು ತರುವಂಥ ಕೆಲಸದಲ್ಲಿ ಅಲ್ಲಿನ ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನುವಂಥ ಆರೋಪವನ್ನು ವಿರಾಜಪೇಟೆ ತಾಲ್ಲೂಕಿನ ಪ್ರತಿಯೊಬ್ಬ ನಾಗರೀಕರೂ ಮಾಡುತ್ತಿದ್ದಾರೆ. ಈ ಹಿನ್ನಲೆಯಲ್ಲಿ ನಾನು ತಮ್ಮ ಮೂಲಕ ಸರ್ಕಾರದ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ನಿಷ್ಕ್ರಿಯರಾಗಿರುವಂಥ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ರವರನ್ನು ಅವರು ಕೆಎಟ ಮೂಲಕ ತಂದಿರುವ ತಡೆಯಾಜ್ಞೆಯನ್ನು ತೆರವುಗೊಳಿಸಿ, ಕೂಡಲೇ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಬೇಕು. ಅದೇ ರೀತಿ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು

ಅಲ್ಲಿಗೆ ಬಂದು ಮೂರು ವರ್ಷಕ್ಕೂ ಹೆಚ್ಚಿನ ಸಮಯವಾಗಿದ್ದು, ಈ ಅವಧಿಯಲ್ಲಿ ಅವರು ಆ ಒಂದು ಭಾಗವನ್ನು ನಿರ್ಲಕ್ಷ್ಯ ಮಾಡಿರುವುದರಿಂದ, ಸರಿಯಾದಂಥ ವ್ಯವಸ್ಥೆಯನ್ನು ಮಾಡದೇ, ಸರಿಯಾದಂಥ ವೀಕ್ಷಣೆಯನ್ನು ಮಾಡದೇ ಕೆಲಸದ ವಿಷಯದಲ್ಲಿ ನಿರ್ಲಕ್ಷ್ಯ ಮಾಡಿರುವುದರಿಂದ ಅವರನ್ನೂ ಸಹ ಕೊಡಗು ಜಿಲ್ಲೆಯಿಂದ ಬೇರೆ ಜಿಲ್ಲೆಗೆ ವರ್ಗಾವಣೆ ಮಾಡಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಮೂರನೆಯದಾಗಿ, ಕಾರ್ಯದರ್ಶಿಗಳು ತಕ್ಷಣವೇ ಅಂದರೆ ಈ ವಾರದಲ್ಲೇ ಆ ಒಂದು ಭಾಗಕ್ಕೆ ಭೇಟಿ ನೀಡಿ ಮಾಕುಟ ಭಾಗದಲ್ಲಿನ ರಸ್ತೆಗಳ ಪರಿಸ್ಥಿತಿಯನ್ನು ನೋಡಬೇಕು. ಆ ರಸ್ತೆಗಳ ಪರಿಸ್ಥಿತಿ ಹೇಗಿದೆ ಎಂದು ನೀವು ಈಗ ಕೊಟ್ಟಿರುವ ವರದಿಯಲ್ಲೇ ಹೇಳಿದ್ದೀರಿ. ಆ ಪರಿಸ್ಥಿತಿಯನ್ನು ಅವಲೋಕನ ಮಾಡಿ, ಅಲ್ಲಿ ಜನರು ಹೇಗೆ ಸಂಚಾರ ಮಾಡಬೇಕು ಯಾವ ರೀತಿ ಅವರು ದಿನನಿತ್ಯದ ಬದುಕನ್ನು ಸಾಗಿಸಲು ಎಷ್ಟು ಕಷ್ಟಪಡುತ್ತಿದ್ದಾರೆ ಎನ್ನುವುದರ ಬಗ್ಗೆಯೂ ಕೂಡ ತಾವು ಗಮನವನ್ನು ಹರಿಸಬೇಕು ಎಂದು ಹೇಳುತ್ತಿದ್ದೇನೆ. ಈ ಎರಡು ಅಂಶಗಳ ಬಗ್ಗೆ ತಾವು ಗಮನ ಹರಿಸಲೇಬೇಕು. ಒಂದು ವಾಡಿಕೆಗಿಂತ ಹೆಚ್ಚು ಮಳೆಯಾಗಿರುವುದರಿಂದ ಕೊಡಗು ಜಿಲ್ಲೆಗೆ ಪರಿಹಾರ ಕಾರ್ಯಕ್ಕೆ ತತ್‌ಕ್ಷಣ ಹಣವನ್ನು ಬಿಡುಗಡೆ ಮಾಡುವುದು. ಎರಡನೆಯದು, ನಿಷ್ಠಿಯರಾಗಿರುವಂಥ ಅಧಿಕಾರಿಗಳನ್ನು ತತ್‌ಕ್ಷಣ ನನ್ನ ಜಿಲ್ಲೆಯಿಂದ ಮತ್ತು ನನ್ನ ತಾಲ್ಲೂಕಿನಿಂದ ವರ್ಗಾವಣೆ ಮಾಡುವುದು. ಮೂರನೇಯದಾಗಿ, ಗುತ್ತಿಗೆದಾರರಿಗೆ ನೀವು ವಹಿಸಿರುವ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡದೇ, ಬೇಜವಾಬ್ದಾರಿತನವನ್ನು ತೋರಿರುವುದರಿಂದ ಅವರನ್ನು ಕಪ್ಪುಪಟ್ಟಿಗೆ ಸೇರಿಸಿ, ಬೇರೆ ಗುತ್ತಿಗೆದಾರರ ಮೂಲಕ ಈ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಆದೇಶ ಕೊಡುವಂಥಾದ್ದನ್ನು ತಾವು ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ (ಮಡಿಕೇರಿ) : ಮಾನ್ಯ ಉಪಾಧ್ಯಕ್ಷರೇ, ಕಳೆದ ಮೇ ತಿಂಗಳ ಕೊನೆಯ ವಾರದಲ್ಲಿ ಸುಮಾರು 35 ರಿಂದ 40 ಇಂಚುಗಳಷ್ಟು ಮಳೆ ಕೇವಲ ಆರು ದಿವಸಗಳಲ್ಲಿ ಬಂದಿದೆ. ಇದರ ಪರಿಣಾಮವಾಗಿ, ಅಲ್ಪಸ್ವಲ್ಪ ಮಾಡಿದ್ದಂಥ ರಸ್ತೆಗಳ ರಿಪೇರಿಯೂ ಸಹ ಹಾಳಾಗಿದೆ. ಇವತ್ತು ಇಡೀ ಜಿಲ್ಲೆಯಲ್ಲಿ ಎಲ್ಲಿಯು ವಾಹನಗಳನ್ನು ಓಡಿಸಲಾಗದಂಥ ಪರಿಸ್ಥಿತಿಯನ್ನು ನಾವು ಜಿಲ್ಲೆಯಲ್ಲಿ ಕಾಣುತ್ತಿದ್ದೇವೆ. ಈ ರೀತಿಯ ಮಳೆ ಬಂದಾಗ, ವಿಶೇಷವಾದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾದಂಥವರು ಅಲ್ಲಿನ ಜಿಲ್ಲಾಧಿಕಾರಿಗಳು. ಅವರು ಜಿಲ್ಲೆಯಲ್ಲಿ ಎಲ್ಲಿಯೂ ಪ್ರವಾಸ ಮಾಡಲಿಲ್ಲ. ಎಷ್ಟು ಮಳೆ ಬಿದ್ದಿದೆ ಎಂದು ಸರ್ಕಾರಕ್ಕೆ ವರದಿ ಕೊಟ್ಟಿದ್ದೀರಿ ಎಂದರೆ ಅದಕ್ಕೆ ಸಮರ್ಪಕವಾದ ಉತ್ತರವಿಲ್ಲ. ಎಷ್ಟು ಮಳೆ ಬರುತ್ತಿದೆ, ಎಷ್ಟು ನಷ್ಟವಾಗುತ್ತಿದೆ ಎಂದು ನಾನು ದಿನಾ ವರದಿ ಕಳುಹಿಸುತ್ತಿದ್ದೇನೆ ಎಂದು ಹೇಳುತ್ತಾರೆ. ಅಂದರೆ ದಿನಾ ಮಳೆ ಬರುತ್ತದೆ ಎನ್ನುವಂಥ ಉತ್ತರ ಜಿಲ್ಲಾಧಿಕಾರಿಗಳಿಂದ ಬರುತ್ತಿದೆ. ಇಂಥ ಬೇಜವಾಬ್ದಾರಿ ಅಧಿಕಾರಿಗಳೇ ಜಿಲ್ಲೆಯಲ್ಲಿ ತುಂಬಿಹೋಗಿದ್ದಾರೆ. ಮಾನ್ಯ ಬಸವರಾಜುರವರು ಪಿಡಬ್ಲ್ಯೂಡಿ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ. ಅದನ್ನು ನಾನು ಮತ್ತೆ ಪ್ರಸ್ತಾಪ ಮಾಡುವುದಿಲ್ಲ. ಈ

ಇಲಾಖೆಯಲ್ಲಿ. ಸರ್ಕಾರಕ್ಕೆ ಯಾರು ಮಾಹಿತಿಯನ್ನು ಕೊಡಬೇಕೋ ಅವರು ಆ ಕೆಲಸವನ್ನು ಸರಿಯಾಗಿ ಮಾಡಿಲ್ಲ. ಮಳೆಬಿಂದ ಜಿಲ್ಲೆಯಲ್ಲಿ ರಸ್ತೆಗಳು ಮಾತ್ರ ಹಾಳಾಗಿಲ್ಲ. ಜಿಲ್ಲೆಯ ಅನೇಕ ಭಾಗದಲ್ಲಿ ಎರಡನೇ ಬೆಳೆಯಾಗಿ ಭತ್ತವನ್ನು ಬೆಳೆದಿದ್ದರು. ಅದನ್ನು ಒಬ್ಬ ರೈತನೂ ಕುಬ್ಬಿಲ್ಲ. ಅದು ಮೇ ಕೊನೆಯ ವಾರದಲ್ಲಿ ಕುಬ್ಬಿಗೆ ಬರುವಂಥಾದ್ದು. ಮಳೆ ಬಂದು ಭತ್ತವೆಲ್ಲಾ ಮೊಳಕೆ ಬಂದು ಹಾಳಾಗಿದ್ದರೆ, ಇದರ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನೇ ಕೊಟ್ಟಿಲ್ಲ. ಕೇಳಿದರೆ, ನಾನು ದಿನಾ ಮಾಹಿತಿಯನ್ನು ಕೊಡುತ್ತೇವೆ ಎನ್ನುವಂಥ ಉದ್ಧಟತನದ ಮಾತನಾಡುವಂಥ ಅಧಿಕಾರಿಗಳೇ ಅಲ್ಲಿ ತುಂಬಿಹೋಗಿದ್ದಾರೆ. ಇವತ್ತು ಇದರ ಬಗ್ಗೆ ಕ್ರಮ ಆಗಲೇಬೇಕಾಗಿದೆ ಏಕೆ ಸರ್ಕಾರಕ್ಕೆ ಇವರು ಮಾಹಿತಿ ಕೊಡುತ್ತಿಲ್ಲ? ಸರ್ಕಾರ ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ನಿನ್ನೆ ಮೊನ್ನೆಯಿಂದ ಮತ್ತೆ ಮಳೆ ಪ್ರಾರಂಭವಾಗಿದೆ. ನಿನ್ನೆ ಒಂದೇ ದಿವಸದಲ್ಲಿ ಮಡಿಕೇರಿಯ ಸುತ್ತಮುತ್ತ ವಿರಾಜಪೇಟೆಯ ಕೆಲವು ಭಾಗಗಳಲ್ಲಿ ಆರು ಇಂಚಿಗಿಂತ ಹೆಚ್ಚು ಮಳೆ ಹೊಡೆದಿದೆ. ಈ ರೀತಿ ಮಳೆ ಬಂದರೂ ಅಧಿಕಾರಿಗಳು ಸರ್ಕಾರಕ್ಕೆ ಏಕೆ ಮಾಹಿತಿ ಕೊಡುತ್ತಿಲ್ಲ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಇದರ ಬಗ್ಗೆ ಗಮನ ಹರಿಸಬೇಕು ಎಂದು ಹೇಳುತ್ತೇನೆ. ಅದರ ಜೊತೆಗೆ, ಇವತ್ತು ಪಿಡಬ್ಲ್ಯೂಡಿ ಇಲಾಖೆಯಿಂದ ಒಂದಷ್ಟು ಕೆಲಸ ಆಗಿದ್ದರೂ ಕೂಡ, 3054 ಅಕೌಂಟ್‌ನಲ್ಲಿ ಮಡಿಕೇರಿ ವಿಭಾಗಕ್ಕೆ ಸರ್ಕಾರದಿಂದ ಹಣ ಸಮಯಕ್ಕೆ ಸರಿಯಾಗಿ ಬಿಡುಗಡೆಯಾಗುತ್ತಿಲ್ಲ. ಹಾಗಾಗಿ, ಕೆಲವು ಕಾಂಟ್ರಾಕ್ಟರ್ ಗಳು ಕೆಲಸ ಮಾಡಲು ಹಿಂಜರಿಯುತ್ತಿದ್ದಾರೆ. ಹಣವನ್ನು ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಕೊಡಗು ಜಿಲ್ಲೆ ಎಂದರೆ ಒಂದು ರೀತಿಯ ತಾತ್ಸಾರಸ ಪರಿಸ್ಥಿತಿ ಇರುವುದು ನಮ್ಮ ಅನುಭವಕ್ಕೆ ಬರುತ್ತಿದೆ. ಏಕೆ ಈ ರೀತಿಯಾಗುತ್ತಿದೆ? ಇಲಾಖೆಯಿಂದ ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆಯಾಗುತ್ತಿಲ್ಲ. ಹಿಂದೆ ಕೂಡ ನಾನು ಒತ್ತಾಯ ಮಾಡಿದ್ದೆ. ಕೊಡಗು ಜಿಲ್ಲೆಗೆ ಏನೇ ಅನುದಾನ ಕೊಡುವುದಿದ್ದರೂ ಅದನ್ನು ನವೆಂಬರ್-ಡಿಸೆಂಬರ್ ಒಳಗೆ ಕೊಡಬೇಕು. ಏಪ್ರಿಲ್ ನಂತರ ಅಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನುವಂಥ ಮಾತನ್ನು ಹೇಳಿದ್ದರೂ ಕೂಡ ಇವತ್ತು ಅನುದಾನ ಇನ್ನೂ ಬಿಡುಗಡೆಯಾಗದಿರುವುದರಿಂದ, ಕೆಲಸ ಮಾಡಲು ಯಾರೂ ಮುಂದೆ ಬರುತ್ತಿಲ್ಲ. ಮೇ ತಿಂಗಳಲ್ಲಿ ಪ್ರಾರಂಭ ಮಾಡಿದ ಕೆಲಸಗಳೆಲ್ಲವೂ ವ್ಯರ್ಥವಾಗಿವೆ. ಇದಕ್ಕೆ ವಿಶೇಷ ಗಮನ ಹರಿಸಬೇಕು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಎಚ್ಚರಿಕೆಯನ್ನು ಕೊಡಬೇಕು. ಅವರನ್ನು ವರ್ಗಾವಣೆ ಮಾಡಿ ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ಹಾಕಿಕೊಡಿ ಎನ್ನುವ ವಿನಂತಿಯೂ ನನ್ನದಿದೆ.

ಶ್ರೀ ಎ. ಕೃಷ್ಣಪ್ಪ (ವರ್ತೂರು) : ಮಾನ್ಯ ಉಪಾಧ್ಯಕ್ಷರೇ, ಇದು ಬರೀ ಕೊಡಗಿನ ಅನುಭವವಲ್ಲ. ನಾವು ವಿಧಾನಸೌಧಕ್ಕೆ ಕೇವಲ 14 ಕಿ.ಮೀ. ದೂರದಲ್ಲಿದ್ದೇವೆ. ಶ್ರೀಮಾನ್ ರೇವಣ್ಣನವರು ಈ ಮೊದಲು ಮಂತ್ರಿಯಾಗಿದ್ದಾಗ, ಆಗಿನ ಶ್ರೀಮಾನ್ ಧರ್ಮಸಿಂಗ್‌ರವರ ಸರ್ಕಾರದಲ್ಲಿ ಕೆಲವೊಂದು ರಸ್ತೆಗಳಿಗೆ ಮಂಜುರಾತಿಯನ್ನು ಕೊಟ್ಟಿದ್ದರು. ಅದನ್ನು

ವಹಿಸಿಕೊಂಡಂಥ ಕಾಂಟ್ರಾಕ್ಟರ್ ಅವನಿಗೆ ಇಷ್ಟಬಂದ ಹಾಗೆ ಮಾಡಿಬಿಟ್ಟು. ಹಳ್ಳಗಳನ್ನು ತೋಡಿಬಿಟ್ಟು ಹೊರಟುಹೋಗಿದ್ದಾನೆ.

5.00 P.M.

Machineries ಇಲ್ಲ, equipments ಸಹ ಇಲ್ಲ. ಈ ಗೋಳನ್ನು ಸಾವಿರ ಸಲ ಹೇಳಿಕೊಂಡರೂ ಕೂಡ ಸರ್ಕಾರದ ಗಮನ ಆ ಕಡೆಗೆ ಹರಿಯಲಿಲ್ಲ. 7 deaths ಆಗಿದೆ. ಕೋರಮಂಗಲ-ಸರ್ಜಾಪುರ ರಸ್ತೆಯಲ್ಲಿ WIPRO, INFOSS ನಂಥ ಪ್ರತಿಷ್ಠೆಯ ಕಾರ್ಖಾನೆಗಳೇನಿವೆ, ಆ ರಸ್ತೆಯಲ್ಲಿಯೇ ಈ ಗತಿಯಾಗಿದೆಯೆಂದು ಇವತ್ತು ಪತ್ರಿಕೆಗಳ head lines ನಲ್ಲಿ ಬರೆದಿದ್ದಾರೆ. ವರ್ತೂರು-ಕೋಡಿಯಿಂದ ಹಿಡಿದು ವರ್ತೂರು-ಗುಂಜೂರು, ಸರ್ಜಾಪುರ ಸರ್ಕಲ್ ಆ ರಸ್ತೆಯನ್ನೂ ಕೂಡ ಹಾಗೆಯೇ ಬಿಟ್ಟುಬಿಟ್ಟಿದ್ದಾರೆ. ವಾರದಲ್ಲಿ ಇಬ್ಬರು ಮೂವರು ಸಾಯುತ್ತಲೇ ಇರುತ್ತಾರೆ. ದಿನಾಲೂ accident ಅಂತೂ permanent ಆಗಿದೆ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕೇಳುವುದೇನೆಂದರೆ, ಸತ್ಯದ ಸಂಗತಿ ಏನಿದೆ ಎಂದು ಪೋಲಿಸ್ ಇಲಾಖೆಯಿಂದ ಒಂದು report ಅನ್ನು ತರಿಸಿಕೊಳ್ಳಿ. ಒಂದನೆಯದಾಗಿ, Contractor ಗೆ ಹಣ ಕೊಟ್ಟಿಲ್ಲ. ಎರಡನೆಯದಾಗಿ S.R. revise ಮಾಡಿಲ್ಲ. ಹಾಗಾಗಿ ಆ ಕೆಲಸ ಮಾಡುವುದಿಲ್ಲ. ಹಿಂದೆ ಕೊಟ್ಟಂಥ ಕಾಮಗಾರಿಗಳು ಯಾವುದೂ ಮುಗಿದಿಲ್ಲ. ಇವತ್ತು ಪರಿಸ್ಥಿತಿ ಯಾವ ಹಂತಕ್ಕೆ ತಲುಪಿದೆಯೆಂದರೆ, ಪ್ರತಿದಿನ ಜನರು strike ಮಾಡುತ್ತಿದ್ದಾರೆ agitations: ನಾವೇನೂ ತಪ್ಪ ಮಾಡಲಿಲ್ಲ. ತಪ್ಪ ಮಾಡಿದಂಥದನ್ನು ಸರಿಮಾಡಬೇಕಾದ ಸರ್ಕಾರದವರು ಕಾಲಕ್ಕೆ ಸರಿಯಾಗಿ ಕ್ರಮಗಳನ್ನು ತೆಗೆದುಕೊಳ್ಳದೆಯೇ ಈ ಅಧ್ವಾನದ ಪರಿಸ್ಥಿತಿಯಾಗಿಬಿಟ್ಟಿದೆ. ಆ ಭಾಗ ಸುಮಾರು 14 ಸಾವಿರ ಕೋಟಿ ರೂಪಾಯಿಗಳ ಲಾಭವನ್ನು ರಾಯ್ಕು ಸರ್ಕಾರ, ರಾಷ್ಟ್ರ ಸರ್ಕಾರಕ್ಕೆ ಕೊಡುವಂಥ ಪ್ರದೇಶವಾಗಿದೆ. ಬೆಂಗಳೂರಿನ ಆ ಕ್ಷೇತ್ರದಲ್ಲಿ ನಡೆಯುವಂಥ ಕಟ್ಟಡಗಳ ಅಭಿವೃದ್ಧಿ ಕೆಲಸಗಳಿಗೆ ಬೇಕಾದ materials complete ನಮ್ಮ ರಸ್ತೆಗಳ ಮೇಲೆ ಬರಬೇಕು. ಒಂದೊಂದು vehicle ನಲ್ಲಿ 30 tons 40 tons materials ಅನ್ನು ತುಂಬಿಕೊಂಡು ಬರುತ್ತವೆ. ಆ ರಸ್ತೆಗಳು ಅದಕ್ಕಾಗಿ ಮಾಡಿರುವಂಥವು ಅಲ್ಲ. ಸಾಮಾನ್ಯ ವಾಹನಗಳ ಓಡಾಟದ ಸೌಕರ್ಯಕ್ಕೆ ಮಾಡಿರುವ ರಸ್ತೆಗಳು ಈ ಗತಿಯಾಗಿವೆ. ಪ್ರತಿಷ್ಠೆಯ ಬಂಡವಾಳದಾರರು ಹೊರಗಡೆಯಿಂದ ಬರುತ್ತಿದ್ದಾರೆ. ನಮಗೆ ಮತ್ತು ನಮ್ಮ ಆಡಳಿತಕ್ಕೆ ಛೀಮಾರಿ ಹಾಕುತ್ತಿದ್ದಾರೆ. ಹೊರಗಡೆಯವರ ವಿಚಾರ ಬೇಡವೆಂದರೂ ಇಲ್ಲಿ ಈ local ಜನರೇ ವಾರಕ್ಕೆ 2-3 ಜನ ಸಾಯುತ್ತಿದ್ದಾರೆ. ಇವತ್ತಾದರೂ ಸರ್ಕಾರ ಗಮನಹರಿಸಿ ಆ contractors ಅನ್ನು ಕರೆತಂದು ಕೆಲಸ ಮಾಡಿಸಬೇಕು. ಬಿಬಿಎಂಪಿ ಮಾನ್ಯ worst example ಉಪಾಧ್ಯಕ್ಷರೆ, ನಬಾರ್ಡ್‌ನಿಂದ ಒಂದು ರಸ್ತೆ ಕೊಟ್ಟಿದ್ದಾರೆ ಅದು ನನ್ನ ಮನೆ ಇರುವ ರಸ್ತೆಯಾಗಿದೆ. Tender ಮಾಡಿ contractor ಗೆ contract ಕೊಟ್ಟು ನಾಲ್ಕು ತಿಂಗಳು ಕಳೆದಿದೆ. ಯಾವ Officer ಗೂ ಅವನು ಬೆಲೆ ಕೊಟ್ಟಿಲ್ಲ. ಇವತ್ತಿನವರೆಗೂ ಆ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಒಂದು ಕಡೆ

ಕಾವೇರಿ ನೀರಿಗಾಗಿ Pipe line ಹಾಕಿದರು. ಮಳೆಗಾಲವಾಗಿದ್ದು ಆ ರಸ್ತೆಯ ಗತಿಯನ್ನು ನೋಡಿದರೆ ನಾವು ನಾಚಿಕೆ ಪಡುವಂಥ ಪರಿಸ್ಥಿತಿಯಾಗಿದೆ. ಶಾಸನಸಭಾ ಸದಸ್ಯನಾಗಿ ನನ್ನ 22 ವರ್ಷಗಳಲ್ಲಿ ಇಂಥ ಅಪಮಾನಕರವಾದಂಥ ಪರಿಸ್ಥಿತಿಯನ್ನು ಎಂದೂ ಕಾಣಲಿಲ್ಲ. ಆ Contractor ಮೇಲೆ ಇವರ command ಇಲ್ಲ. ಹೀಗಾಗಿ ಆ ರಸ್ತೆಗಳ ಪರಿಸ್ಥಿತಿ ಅಧೋಗತಿಯಾಗಿದೆ. ಮಾನ್ಯ ಮಾಂತ್ರಿಗಳು ಈಗಲಾದರೂ ಆ ಕಡೆಗೆ ಗಮನಹರಿಸ ಬೇಕು ಅಲ್ಲಿ ಜನ ಸಾಯುತ್ತಿದ್ದಾರೆ. ಲಕ್ಷಾಂತರ vehicles ಅಲ್ಲಿ ಓಡಾಟವಾಗುತ್ತಿದೆ. ಅದು ಅವರಿಗೂ ಗೊತ್ತಿದೆ. ಅವರು ಮೂರ್ನಾಲ್ಕು ಸಾರಿ ಆ area ದಲ್ಲಿ inspection ಮಾಡಿದ್ದಾರೆ. ಈಗಲಾದರೂ ಅದನ್ನು ಸರಿಮಾಡಬೇಕು. ಆ ಜನರ ಸಾವನ್ನು ತಪ್ಪಿಸಬೇಕು. ದಿನನಿತ್ಯ ಆಗುವ accidents ಅನ್ನು ಆಗದ ಹಾಗೆ ಅವರು ನೋಡಿಕೊಳ್ಳಬೇಕು. ಅದಕ್ಕಾಗಿ ಅವರು ಏನು ಕ್ರಮ ಅನುಸರಿಸುತ್ತಾರೆಂದು ನಮಗೆ ಹೇಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ರಾಜ್ಯದ ತುಂಬಾ ತಾವೇನು ಮಾಡಿ ಹೋದಿರಿ, ಅವರು ಕೆಲಸವನ್ನೇ ಮಾಡಿಲ್ಲ. ನಮ್ಮಲ್ಲಿ P.W.D. ಯವರೂ ಮಾಡುತ್ತಿಲ್ಲ, ಅವರೂ ಮಾಡುತ್ತಿಲ್ಲ, ಆ ರಸ್ತೆಗಳಲ್ಲಿ ಎತ್ತಿನ ಗಾಡಿಗಳೂ ಸಹ ಅಡ್ಡಾಡುತ್ತಿಲ್ಲ. ಇಂಥ ಸ್ಥಿತಿಯಲ್ಲಿದೆ. ಅದಕ್ಕೆ ದಯವಿಟ್ಟು ಕೂಡಲೇ ಅಲ್ಲಲ್ಲಿ ಕೆಲಸ ಪ್ರಾರಂಭ ಮಾಡುವಂಥ ವ್ಯವಸ್ಥೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಖಾತೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಸುಮಾರು 13 ಸಾವಿರ ಕಿ.ಮೀ.ನಷ್ಟು ರಾಜ್ಯ ಹೆದ್ದಾರಿ ರಸ್ತೆ ಇದೆ. ಆ ರಾಜ್ಯ ಹೆದ್ದಾರಿಯಲ್ಲಿ ಸುಮಾರು ಎರಡು ಸಾವಿರ ಕಿ.ಮೀ. ನಷ್ಟು ರಸ್ತೆಯನ್ನು ರಸ್ತೆ ನಿಗಮದ ಮೂಲಕ ಮತ್ತು ಸುಮಾರು ಒಂದೂವರೆ ಸಾವಿರದಿಂದ ಎರಡು ಸಾವಿರ ಕಿ.ಮೀ. ನಷ್ಟು ರಸ್ತೆಯನ್ನು K.S.H.I.P. ಮೂಲಕ ಮಾಡಿದ್ದೇವೆ. ಬಾಕಿ ಸುಮಾರು 8 ಸಾವಿರ ಕಿ.ಮೀ. ನಷ್ಟು ರಾಜ್ಯ ಹೆದ್ದಾರಿ ರಸ್ತೆ ಇದೆ. ನಮ್ಮ ಅಧಿಕಾರಿಗಳು ಯಾರೂ ಕೆಲಸ ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ. 8 ಸಾವಿರ ಕಿ.ಮೀ. ರಸ್ತೆ ಮಾಡುವುದಕ್ಕೆ ಇವತ್ತಿನ traffic ಅನುಗುಣವಾಗಿ ರಸ್ತೆ ಮಾಡಬೇಕಾದರೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಈಗ ನಮ್ಮ ಇಲಾಖೆಗೆ 3 years maintenance ಗೆಂದು 13 ಸಾವಿರ ಕಿ.ಮೀ ರಸ್ತೆಗೆ 468 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಕೆಲವು ಕಡೆಯ ರಸ್ತೆಗಳಲ್ಲಿ ಕಲ್ಲು ತುಂಬಿಕೊಂಡಿರುವ ಲಾರಿ ಹೋಗಬಹುದು. ಉದಾಹರಣೆಗೆ ಚಿಕ್ಕನಾಯಕನ ಹಳ್ಳಿಯಿಂದ ಹಾಸನಕ್ಕೂ ಬರುವ ರಸ್ತೆ ಇದೆ. ಇವತ್ತು ಆ ರಸ್ತೆಗೆ 3 years maintenance ಕೊಟ್ಟಿದ್ದಾರೆ. ಅದರಲ್ಲಿ ಯಾರೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಯಾರೂ contractor ಬರುವುದಿಲ್ಲ. ಒಂದು ಸಲ ಕೆಲಸ ಮಾಡಿದರೆ ಮಾರನೇ ದಿವಸ ಬೆಳಗ್ಗೆ ಮತ್ತೆ ಆ ರಸ್ತೆ ಹಾಳಾಗಿರುತ್ತದೆ. ಅದಕ್ಕೆ ಈಗಾಗಲೇ ನಾನು ಸಂಬಂಧಪಟ್ಟ ಹಣಕಾಸು ಇಲಾಖೆಯಲ್ಲಿ, ನಾನು ಹಿಂದೆ ಮಂತ್ರಿಯಾಗಿದ್ದಂಥ ಕಾಲದಲ್ಲಿ ಕನಿಷ್ಟ ನಮ್ಮ ರಸ್ತೆಗಳನ್ನು ಯಾವುದು ಸುಧಾರಿಸಬೇಕು.

ಎಂಬ ಬಗ್ಗೆ ಚಿಂತನೆ ನಡೆಸಿದ್ದೇವೆ. ಏಕೆಂದರೆ ಇವತ್ತು ಒಂದು State Highway ಅನ್ನು ಒಂದು ಮಟ್ಟಕ್ಕೆ ತರಬೇಕಾದರೆ ಕನಿಷ್ಟ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಒಂದು ಭಾಗದಲ್ಲಿ ಬೇಕು. ಇದೇ ರೀತಿ ನಮ್ಮಲ್ಲಿ 36 ಸಾವಿರ ಕಿ.ಮೀ. M.D.R. ರಸ್ತೆ ಇದೆ. ನಮ್ಮಲ್ಲಿ ಒಂದು ಕಿ.ಮೀ. ರಸ್ತೆಯನ್ನು maintain ಮಾಡುವುದಕ್ಕೆ ಕೇವಲ 16 ಸಾವಿರ ರೂಪಾಯಿಗಳನ್ನು ಇಡಲಾಗಿದೆ. ಆದರೆ ಹೊರರಾಜ್ಯದಲ್ಲಿ ಒಂದು ಕಿ.ಮೀ. ರಸ್ತೆಯ maintain ಗೆಂದು ಸುಮಾರು 2 ರಿಂದ 3 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಪರಿಸ್ಥಿತಿ ಏನಿನೆ. ಅಂದರೆ, ನಮ್ಮ ಇಂಜಿನಿಯವರು ಉದಾಹರಣೆಗೆ ಹೇಳುವುದಾದರೆ ಸ್ವಲ್ಪ ಜೆಲ್ಲಿ ಹಾಕುವುದು ಅಥವಾ gravel ಹಾಕಿಬಿಟ್ಟು ಆ ಕಡೆಗೆ ಮುಚ್ಚಿ 16 ಸಾವಿರ ರೂಪಾಯಿಗಳಿಗೆ bill ಅನ್ನು ಬರೆಯುವುದು ಬಿಟ್ಟರೆ, ಅಷ್ಟು ಹಣದಲ್ಲಿ ಅವರು proper ಆಗಿ ಗುಂಡಿ ಮುಚ್ಚುವುದಕ್ಕಾಗುವುದಿಲ್ಲ. ನಾನು ಮಂತ್ರಿಯಾಗಿ ಬರುವುದಕ್ಕೆ ಮುಂಚೆ ಮಾನ್ಯ ಕೃಷ್ಣಪ್ಪನವರ ಕ್ಷೇತ್ರದಲ್ಲಿ ಹಿಂದಿನ ಸರ್ಕಾರ 4 ಕೋಟಿ ರೂಪಾಯಿಗಳ Tender ಕರೆದಿದ್ದರು. ನಾನು ಬಂದ ಮೇಲೆ 4 ಕೋಟಿ ರೂಪಾಯಿಗಳ ಕೆಲಸ ಆವತ್ತು ಪುನಃ Cabinet ಗೆ ತೆಗೆದುಕೊಂಡು ಹೋಗಿ tender ಕರೆದು ಅದನ್ನು ಸುಮಾರು 17 ಕೋಟಿಗೋ, 34 ಕೋಟಿಗೋ ಮಾಡಿದ್ದೇವೆ. ನೀವ್ಯಾರು contractor ಅನ್ನು ಗುರುತಿಸಿದ್ದಿರೋ ಅವರಿಗೇ contract ಅನ್ನು ಕೊಟ್ಟಿದ್ದೇವೆ. ಆ contractor ಅನ್ನು ನಾವೇನೂ change ಮಾಡಲಿಲ್ಲ.

ಶ್ರೀ ಎ. ಕೃಷ್ಣಪ್ಪ : ಇಲ್ಲ, ನಾನು ಮಾಡಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಅಲ್ಲ. ನನಗೆ ಗೊತ್ತಿಲ್ಲ. ನಾವೂ ಮಾಡಿಲ್ಲ, ನೀವೂ ಮಾಡಿಲ್ಲ. ಹಿಂದಿನ ಕಾಂಗ್ರೆಸ್ ಸರ್ಕಾರ ಮಾಡಿದ್ದನ್ನೇ ನಾವು ಮಾಡಿದ್ದು. ನಾನು ಹೊಸದಾಗಿ ಏನೂ change ಮಾಡಲಿಕ್ಕೆ ಹೋಗಲಿಲ್ಲ. 4 ಕೋಟಿ ರೂ ಇರುವ tender ಅನ್ನು 34 ಕೋಟಿ ರೂಗೆ ನಾನು ಶ್ರೀ ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಅಂದಾಜು ಮಾಡಿಸಿದೆ ಏಕೆಂದರೆ estimate ಮಾಡದೆಯೇ ಸುಮ್ಮನೆ 4 ಕೋಟಿ ರೂಪಾಯಿಗಳಿಗೆ tender ಕರೆದರು. ನಾನು ಆ ರಸ್ತೆ ಶಾಶ್ವತವಾಗಿ ಇರಬೇಕೆನ್ನುವ ದೃಷ್ಟಿಯಿಂದ ನಾನು clean ಆಗಿ estimate ಎಲ್ಲಾ ಮಾಡಿಸಿದೆ. ಮಾಡಿಸಿ ಆ ರಸ್ತೆಗೆ ಸುಮಾರು 34 ಕೋಟಿ ರೂಪಾಯಿಗಳಿಗೆ ಸಚಿವಸಂಪುಟದಲ್ಲಿ approval ಮಾಡಿಸಿ tender ಮಾಡಿ Agency fix ಮಾಡಿದ್ದೇನೆ. ಕೆಲಸ ಸಹ ಸಾಕಷ್ಟು ಎಂದರೆ ಸುಮಾರು 50% ಆಗಿದೆ. ಉಳಿಕೆ ಕೆಲಸವನ್ನು ನಾನು ಮಾಡಿಸುತ್ತೇನೆ. ಏಕೆಂದರೆ ಅದು ನನಗೆ ಗೊತ್ತು ನಾನು ಇರುವವರೆಗೆ 20 ಪರ್ಸೆಂಟ್ ಎಷ್ಟೋ ಕೆಲಸ ಆಗಿತ್ತು. ಈಚೆಗೆ ನಾಲ್ಕೈದು ತಿಂಗಳಿನಿಂದ ಏನಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಅದನ್ನು ಮಾಡಿಸುತ್ತೇವೆ. ಅದರ ಜೊತೆಗೆ ಮಾನ್ಯ ಬಸವರಾಜುರವರು ಮತ್ತು ಬೋಪಯ್ಯನವರು ಹೇಳಿದ್ದಾರೆ. ಎಲ್ಲಾ ವಿಧಾನಸಭಾ ಸದಸ್ಯರೂ ಏನೇನೂ ಮಾಡಬೇಕಾಗಿದೆ. ಎಂಬುದನ್ನು ಹೇಳುತ್ತೀರಿ. ಆದರೆ ನನ್ನ ಇಲಾಖೆಗೆ ಈ

ವರ್ಷ ಹಣಕಾಸು ಇಲಾಖೆಯಿಂದ ಎಷ್ಟು ಹಣ ಇಟ್ಟಿದ್ದಾರೆನ್ನುವುದರ ಬಗ್ಗೆ ಯಾರೂ ಚರ್ಚೆ ಮಾಡುವುದಿಲ್ಲ.

(ಗೊಂದಲ)

ಶ್ರೀ ಕೆ. ಶ್ರೀನಿವಾಸ ಗೌಡ : ನಿಮ್ಮ co-party ಯವರನ್ನೇ ಉಪ ಮುಖ್ಯ ಮಂತ್ರಿಗಳನ್ನಾಗಿಟ್ಟುಕೊಂಡು ನಮ್ಮನ್ನು ಕೇಳುವುದು ಇದು ಯಾವ ನ್ಯಾಯ? ಅವರ ಹತ್ತಿರ ಕೇಳಿ ಆಜ್ಞೆ ತೆಗೆದುಕೊಂಡು ಕೊಡಿ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಹಿಂದೆ ಹಣ ಇಟ್ಟಿದ್ದರೂ ಸಹ ಕೆಲಸವಾಗಿಲ್ಲವೆನ್ನುವ ನಮ್ಮ ದೂರು ಇದೆ.

(ಗೊಂದಲ)

ಶ್ರೀ ಬಿ.ಎ. ಜೀವಿಜಯ (ಕುಶಾಲನಗರ) : ಒಂದು ಸಲ ಮಾನ್ಯ ಲೋಕೋಪಯೋಗಿ ಸಚಿವರೇ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದರು. ಹಣಕಾಸು ಇಲಾಖೆಗೆ ಹಲವಾರು ಬೇಡಿಕೆಗಳನ್ನು ಸಲ್ಲಿಸಿದ 6 ತಿಂಗಳಾದರೂ ಕೂಡ ಹಣಕಾಸು ಇಲಾಖೆಯವರು ಹಣ ಬಿಡುಗಡೆ ಮಾಡಲಿಕ್ಕೆ ಆಗಲಿಲ್ಲವೆಂದು ಹೇಳಿದ್ದರು. ಸುಮಾರು 130 ಕೋಟಿ ರೂಪಾಯಿಗಳಷ್ಟು ಇನ್ನೂ ಹಳೆಯ payment ಬಾಕಿ ಇದೆ. ಹಿಂದಿನ ಸರ್ಕಾರದ್ದು 600 ಕೋಟಿ ರೂಪಾಯಿಗಳು ಅದನ್ನು ತೀರಿಸದೆಯೇ ಪುನಃ ದಿವಸದಿಂದ ದಿವಸಕ್ಕೆ escalation ಆಗುತ್ತಿದೆ. ನಮ್ಮ ಕೊಡಗಿನ ಪರಿಸ್ಥಿತಿ ಬಗ್ಗೆ calling attention ಅನ್ನು ನಾವೂ ಕೂಡ ಬೇರೆ ಹಾಕಿದ್ದೇವೆ. ಆಗ ನಾವು ಚರ್ಚೆ ಮಾಡುತ್ತೇವೆ. ಆರ್ಥಿಕ ಇಲಾಖೆಯವರು ನಿಮ್ಮ ಸಹದ್ಯೋಗಿಯವರು ಹಣ ಬಿಡುಗಡೆ ಮಾಡಿ ಎಂದು file ಅನ್ನು ಕಳುಹಿಸಿಕೊಟ್ಟಾಗ ಅದನ್ನು ಹಣಕಾಸಿನ ಸಚಿವರಾದ ನೀವು approve ಮಾಡಿ ಕಳುಹಿಸಿಕೊಡದಿದ್ದರೆ ಅವರು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ?

ಶ್ರೀ ಆರ್. ಧ್ರುವನಾರಾಯಣ್ (ಸಂತೇಮರನಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ರಾಜ್ಯ ಹೆದ್ದಾರಿಯಿಂದ ಪ್ರತಿ ಜಿಲ್ಲೆಗೂ ಕೂಡ ತಾವು package ಮಾಡಿದ್ದೀರಿ Package ಮಾಡಿ ನಾಲ್ಕೈದು ತಿಂಗಳಾಯಿತು. ಗುತ್ತಿಗೆದಾರರನ್ನೂ ಸಹ ನೇಮಿಸಿದ್ದೀರಿ. ಇದುವರೆಗೂ ಕೂಡ ಆ ಕಾಮಗಾರಿಗಳು ಆಗಿಲ್ಲ. ನಮ್ಮ ಚಾಮರಾಜನಗರ ಜಿಲ್ಲೆಗೆ 10 ಕೋಟಿ ರೂಪಾಯಿಗಳ Package ಅನ್ನು ಕೊಟ್ಟಿದ್ದೀರಿ. ಇದುವರೆಗೂ ಕೂಡ ಆ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ. ಪಕ್ಷದಲ್ಲಿಯೇ ತಮಿಳುನಾಡು ರಾಜ್ಯವಿದೆ. ದಯಮಾಡಿ ನಮ್ಮ ರಾಜ್ಯದ ಇಂಜಿನಿಯರು ಗಳೆಲ್ಲರನ್ನೂ ಕೂಡ ತಾವು ಒಂದು ಸಲ ತಮಿಳುನಾಡಿಗೆ ಕಳುಹಿಸಿಕೊಟ್ಟರೆ ಒಳ್ಳೆಯದು. ಏಕೆಂದರೆ, ಹಳ್ಳಿ ರಸ್ತೆಗೆ ಹೋಗಿ ನೋಡಿ, ತಾಲ್ಲೂಕು ರಸ್ತೆಗೆ ಹೋಗಿ ನೋಡಿ, ಜಿಲ್ಲಾ ರಸ್ತೆಗೆ ಹೋಗಿ ನೋಡಿ, ರಾಜ್ಯ ಹೆದ್ದಾರಿ ನೋಡಿ: National Highway ಎಲ್ಲಾ ಒಂದೇ ತರಹ ಇದೆ. ಪ್ರತಿ ಗ್ರಾಮದಲ್ಲಿ ಕೂಡ ಒಳ್ಳೊಳ್ಳೆಯ ರಸ್ತೆ ಚರಂಡಿ ವ್ಯವಸ್ಥೆ ಮತ್ತು ಎಲ್ಲಾ ತರಹದ ಒಳ್ಳೆಯ

ಗುಣಮಟ್ಟದ ರಸ್ತೆಗಳು ಇವೆ. ದಯಮಾಡಿ ತಾವು ಆ ವ್ಯತ್ಯಾಸವನ್ನು ತುಲನೆ ಮಾಡಿ ಬೇಗ ಆ ರಸ್ತೆಗಳ ಕಾಮಗಾರಿಯನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಮಾನ್ಯ ಸದಸ್ಯರಿಗೆಲ್ಲಾ ಸಮಾಧಾನವಾಗಬಹುದೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಇಲ್ಲಿ ಸಮಸ್ಯೆ ಕೇಳಿರುವುದು ಮಾನ್ಯ ಸದಸ್ಯರುಗಳಾದ ಶ್ರೀ ಬಸವರಾಜುರವರು ಮತ್ತು ಶ್ರೀ ಬೋಪಯ್ಯನವರು. ಯಾವುದೋ subjests ಗೆ ಬಂದು ಬಿಟ್ಟಿದ್ದೇವಲ್ಲಾ. ಈಗ ಅವರು ಯಾರಿಗೆ ಉತ್ತರ ಕೊಡಬೇಕು?

(ಗೊಂದಲ)

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಒಟ್ಟಾರೆ ಹಣ ಜಾಸ್ತಿ ಕೊಡಬೇಕೆಂದು, ಅಂದರೆ ರಸ್ತೆಗಾಗಿ ಜಾಸ್ತಿ ಹಣ ಕೊಡಿ ಎಂದು ಮಾನ್ಯ ಸಚಿವರಾದ ರೇವಣ್ಣನವರು ಕೇಳಿದ್ದಾರೆ.

ಉಪಾಧ್ಯಕ್ಷರು : ಬಹಳಷ್ಟು ಸಮಸ್ಯೆಗಳು ಇದ್ದು ಬಹಳ ಜನ ಪ್ರಶ್ನೆ ಕೇಳಿದ್ದಾರಲ್ಲಾ. ಈಗ ಸಂಬಂಧಪಟ್ಟ ಮಂತ್ರಿಗಳು ಯಾರಿಗೆ ಉತ್ತರ ಕೊಡಬೇಕು?

ಶ್ರೀ ಹೆಚ್.ಡಿ. ಬಸವರಾಜು : ಶನಿವಾರ ಎಷ್ಟರಮಟ್ಟಿಗೆ ದೂರದರ್ಶನದಲ್ಲಿ ಮತ್ತು ಎಷ್ಟು ಬಾರಿ ಅಲ್ಲಿ ಬಂದ್‌ಗಳಾಗಿವೆ, ಎಷ್ಟು ಬಾರಿ ಪ್ರತಿಭಟನೆಯಾಗಿದೆ ಎಂಬುದೆಲ್ಲಾ ಕವರ್ ಆಗಿದೆ. ನನ್ನ ಕೈಯಲ್ಲಿ ಎರಡು ವರ್ಷಗಳಿಂದ ಸಾಧ್ಯವಾದಷ್ಟು ತಡೆದು ತಡೆದು ನನ್ನ ಮನಸ್ಥಿತಿ ತುಂಬಾ ಹದಗೆಟ್ಟಿದೆ. ಆದ್ದರಿಂದ, ನಾನು ವಿನಂತಿಮಾಡಿಕೊಳ್ಳುತ್ತೇನೆ, ಸನ್ಮಾನ್ಯ ಸಚಿವರು ಅಧಿಕಾರಿಗಳ ಜೊತೆ ಒಂದೇ ಒಂದು ದಿವಸ ಆ ರಸ್ತೆಯಲ್ಲಿ ಪ್ರಯಾಣ ಮಾಡಲಿ. ತದನಂತರ, ಅವರು ಏನು ಕ್ರಮಕೈಗೊಳ್ಳುತ್ತಾರೋ ಮಾಡಡಿಕೊಳ್ಳಲಿ. ಅಷ್ಟು ಮಾತ್ರ ನಾನು ಈ ಸದನದಿಂದ ನಿರೀಕ್ಷೆ ಮಾಡುತ್ತಿದ್ದೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಕೇವಲ ಮಡಿಕೇರಿಯಲ್ಲಿ ರಸ್ತೆ ಹಾಳಾಗಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಕಳೆದ ಒಂದೂವರೆ ತಿಂಗಳ ಹಿಂದೆ ಬಂದಾಗ ಕಡೂರು-ಮಂಗಳೂರುವರೆಗೂ Mines Lorry ಓಡಾಡುತ್ತಿರುವುದನ್ನು ನೋಡಿದ್ದಾರೆ. ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಆ cement road ಮಾಡಿದ್ದು. ಅಲ್ಲಿ ರೇವಣ್ಣನವರೂ ಓಡಾಡಿದ್ದಾರೆ. ಹಿಂದೆ ಲೋಕೋಪಯೋಗಿ ಸಚಿವರಾಗಿದ್ದಾಗಲೂ ಓಡಾಡಿದ್ದಾರೆ. ಅದು ರಾಜ್ಯ ಹೆದ್ದಾರಿ: ಅದನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೆ ಏರಿಸುವ ಬಗ್ಗೆ ಕೇಂದ್ರಸರ್ಕಾರಕ್ಕೆ ವರದಿ

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಹೋದ ತಿಂಗಳಲ್ಲಿ ನಾನು ಇವರ (ಯಡಿಯೂರಪ್ಪನವರನ್ನು ಉದ್ದೇಶಿಸಿ) ಕ್ಷೇತ್ರ ಶಿಕಾರಿಪುರಕ್ಕೆ ಹೋಗಿದ್ದೆ. ಅವರೇ ಆ ರಸ್ತೆಯನ್ನು ಇನ್ನೂ ಮಾಡಿಕೊಂಡಿಲ್ಲ. ಇನ್ನೂ ಎಷ್ಟು ಮಾತ್ರ ನಮಗೆ ರಸ್ತೆ ಮಾಡಿಕೊಡುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪರಿಸ್ಥಿತಿ ನೋಡಿಕೊಂಡು ಅರ್ಥ ಮಾಡಿಕೊಳ್ಳಿ

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಯಡಿಯೂರಪ್ಪನವರೇ ರಸ್ತೆ ಮಾಡಿಸಿಕೊಂಡಿಲ್ಲ, ನಮಗೆಷ್ಟು ಮಾತ್ರ ಮಾಡಿಸುತ್ತೀರಿ ಎಂದು ನಾನು ಆವತ್ತೇ ಅಂದುಕೊಂಡೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಹಿಂದೆ ಸಚಿವರಾಗಿ ಬಹಳ ಅನುಭವವಿದ್ದವರು. ಶಿಕಾರಿಪುರ ತಾಲ್ಲೂಕಿನ ರಸ್ತೆ ಸ್ಥಿತಿ ಬಗ್ಗೆ ಬಹಳ ಒಳ್ಳೆಯ ಮಾತು ಹೇಳಿದರು. ಎರಡು ವಿಷಯಗಳನ್ನು ನಾನು ಹೇಳುವುದಕ್ಕೆ ಎದ್ದು ನಿಂತಿದ್ದೇನೆ. ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಅತಿವೃಷ್ಟಿಯಾದಂಥ ವರದಿಗಳು ಬಂದಿವೆ. ಈ ವರದಿಯಾಧಾರದ ಮೇಲೆ ಭಾರತ ಸರ್ಕಾರದ ಮೊದಲ ಕಂತು 45 ಕೋಟಿ ರೂಪಾಯಿ ಬಂದಿದೆ. ಈ ಭಾಗದ ಜಿಲ್ಲೆಗಳಿಗೆ ಕೆಲವೇ ದಿನಗಳಲ್ಲಿ ಹಣ ಬಿಡುಗಡೆ ಮಾಡುತ್ತೇವೆ. ಎರಡನೇಯದು, ಸನ್ಮಾನ್ಯ ರೇವಣ್ಣನವರಿಗೆ ಸಮಾಧಾನ ತರುವಂಥ ಸಂಗತಿ ಮತ್ತು ಶಾಸಕರುಗಳಿಗೆ ಸಮಾಧಾನ ತರುವಂಥ ಇನ್ನೊಂದು ಸಂಗತಿ ಎಂದರೆ, Budget ನಲ್ಲಿ ಏನು P.W.D. ಗೆ ಹಣವನ್ನು ತೆಗೆದಿಟ್ಟಿದೆ ಅದಲ್ಲದೆ, ಇನ್ನೂ extra 150 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇನೆ. ಈ ರಾಜ್ಯದ ರಸ್ತೆಗಳ ಪರಿಸ್ಥಿತಿಯನ್ನು ನೋಡಿಕೊಂಡು ಇನ್ನೂ ಹೆಚ್ಚುವರಿಯಾಗಿ 150 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಆರ್. ಧ್ರುವನಾರಾಯಣ್ : ಸಾಕಾಗುವುದಿಲ್ಲ ಸಾರ್. ಇನ್ನೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡುವುದಕ್ಕಾದರೂ ಪೂರ್ಣ ಅವಕಾಶ ಕೊಡಿ. ಸಮಾಧಾನ ಇಲ್ಲದಿದ್ದರೆ ಏನು ಮಾಡಬೇಕು ಹೇಳಿ? ನಿಮಗೆ ತೃಪ್ತಿ ಸಮಾಧಾನವಾಗುತ್ತದೆ. ನಾನು 150 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತಿದ್ದೇವೆ. ಮೂರನೇಯದು, ಈ ಮನೆಯಲ್ಲಿ ಒಂದು ವಿಷಯ ಚರ್ಚೆಯಾಯಿತು. 50 ಲಕ್ಷ ರೂಪಾಯಿ ಇದ್ದದ್ದನ್ನು 1 ಕೋಟಿ ರೂಪಾಯಿ ಕೊಡುತ್ತೇವೆಂದು ಆಗಿರುವುದನ್ನು ನಾನು ಹೇಳಿದ್ದೆ. ಅದು PWD ರಸ್ತೆಗೆ ಮಾತ್ರ ಕೊಡುತ್ತೇವೆಂದು ನಾನು ಹೇಳಿದ್ದೆ. ಆಮೇಲೆ, ಯಾವುದೇ ರಸ್ತೆ ಆಗಬಹುದು, ನಮಗೆ ಅಧಿಕಾರವಿರಬೇಕೆಂದು ನೀವೆಲ್ಲರೂ ಸಲಹೆ ಕೊಟ್ಟಿರಿ. ಆ 50 ಲಕ್ಷ ರೂಪಾಯಿಗಳ ಒಂದು ಕಂತು, ಇನ್ನೊಂದು 50 ಲಕ್ಷ ರೂಪಾಯಿಗಳನ್ನು ರಸ್ತೆಗಳಿಗೆ ಅಂತ ನೀವು PWD ಯದ್ದಾದರೂ ಮಾಡಿ, ಜಿಲ್ಲಾ ಪಂಚಾಯಿತಿ ಮಾಡಿ, ನಗರದಲ್ಲಾದರೂ ಮಾಡಿ. ಈ ಬಗ್ಗೆ ಇವತ್ತು 300 ಜನ ಸದಸ್ಯರಿಗೆ

ಒಟ್ಟು 150 ಕೋಟಿ ರೂಪಾಯಿಗಳಾಗುತ್ತವೆ. 150 ಕೋಟಿ ರೂಪಾಯಿ ಬಿಡುಗಡೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೇವೆ. 50 ಕೋಟಿ ರೂಪಾಯಿ ಮೊದಲನೇ ಕಂತಾಗಿ, ಮೊದಲು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೆವು. ಇನ್ನೂ 50 ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟಂತೆ ಒಟ್ಟು ಈ ರಾಜ್ಯಕ್ಕೆ ಎಲ್ಲಾ ವಿಧಾನ ಸಭೆ ವಿಧಾನ ಪರಿಷತ್ತಿನ ಶಾಸಕರಿಗೆ ಸಂಬಂಧಪಟ್ಟಂತೆ 50 ಕೋಟಿ ರೂಪಾಯಿಗಳನ್ನು ನಿನ್ನೆ ಮೊನ್ನೆ ಬಿಡುಗಡೆ ಮಾಡಿದ್ದೇವೆ. ಯಾವುದೇ ರಸ್ತೆಗಾಗಿ ಉಪಯೋಗಿಸಬಹುದು. ಒಂದು ಸನ್ಮಾನ್ಯ PWD ಸಚಿವರಿಗೆ ಶಕ್ತಿ ತುಂಬುವುದಕ್ಕೆ 150 ಕೋಟಿ ರೂಪಾಯಿಗಳನ್ನು extra ಕೊಡಿಸುತ್ತಿದ್ದೇವೆ. ಅತಿವೃಷ್ಟಿಯಿಂದ affect ಆಗಿರುವಂಥ ಒಂದು ಪ್ರದೇಶಕ್ಕೆ 45 ಕೋಟಿ ರೂಪಾಯಿಗಳು ಬಂದಿವೆ. ಅದನ್ನು ನೋಡಿಕೊಂಡು ನಾವು ಅದನ್ನೂ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದೇವೆ. ಈ ಮನೆಯಲ್ಲಿರುವಂಥ ಎಲ್ಲಾ ಸದಸ್ಯರಿಗೆ ಗೊತ್ತಾದರೆ ನಾವು ಕಾರ್ಯಕ್ರಮ ರೂಪಿಸುವುದಕ್ಕೆ ಅನುಕೂಲವಾಗುತ್ತದೆ. ನಿಮಗೆ ಸಮಾಧಾನ, ತೃಪ್ತಿಯೇ ಇಲ್ಲವಲ್ಲಾ ನಾನು ಈಗಲೇ ಒಂದು ಕಂತನ್ನು ಇವತ್ತು ಸರ್ಕಾರಿ ಆಜ್ಞೆ ಮಾಡಿ ಮೊದಲನೇ ಕಂತು ಏನು 3 ತಿಂಗಳಿಗೆ ನೀವು Budget ಮಂಜೂರು ಮಾಡಿಕೊಟ್ಟಿದ್ದೀರಿ, ಒಬ್ಬ ಶಾಸಕರಿಗೆ 16 ಲಕ್ಷದ 65 ಸಾವಿರ ರೂಪಾಯಿಗಳನ್ನು ಇವತ್ತು ರಸ್ತೆಗಾಗಿ ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಇಲಾಖಾ ಸಚಿವರು) : ಕಳೆದ ಸಾರಿಯ ಬಡ್ಜೆಟ್‌ನಲ್ಲಿ PWD ಗೆ ಕೇವಲ 90 ಕೋಟಿ ರೂಪಾಯಿಗಳಿತ್ತು. ಇದು ಯಡಿಯೂರಪ್ಪ ಸಾಹೇಬರು ಬರುವುದಕ್ಕೆ ಮುಂಚೆ ಇತ್ತು. ನಾವು ಹೋರಾಟ ಮಾಡಿ, ನಮ್ಮ ಸಿಂಧ್ಯ ಸಾಹೇಬರು ಇಲ್ಲೇ ಇದ್ದಾರೆ, ಕೊನೆಗೆ ಅವರು 300 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದರು. ಆದರಿಂದ ಸ್ವಲ್ಪ PWD ಗೆ ಇಲಾಖೆಗೆ ಆವತ್ತು ಸ್ವಲ್ಪ ಉಸಿರು ಬಂತು ಎಂದು ಹೇಳಬಹುದು. ಅದಕ್ಕೆ ನಾನು ಹೇಳುವುದು, ಒಂದು ದಿನ ಚರ್ಚೆ ಮಾಡಬೇಕಾಗುತ್ತದೆ, PWD ಮತ್ತು ಇಂಧನ ಇಲಾಖೆ ಈ ಎರಡು ಇಲಾಖೆಗಳ ಬಗ್ಗೆ ನಮ್ಮ ಸನ್ಮಾನ್ಯ ಎಲ್ಲಾ ಸದಸ್ಯರೂ ಪಕ್ಷಪಾತ ಮಾಡುವುದು ಬೇಡ, ಎಲ್ಲಾ ಸದಸ್ಯರೂ ಒಂದು ದಿನ ಚರ್ಚೆ ಮಾಡಬೇಕು. ಲೋಕೋಪಯೋಗಿ ಇಲಾಖೆ ಬಗ್ಗೆಯೇ ಚರ್ಚೆ ಮಾಡಿ. ಇಂಧನ ಇಲಾಖೆ ಬಗ್ಗೆಯೇ ಚರ್ಚೆ ಮಾಡಿ. ಏಕೆಂದರೆ, ಇವತ್ತು 45 ವರ್ಷಗಳಾಗಿವೆ. ಇವತ್ತು 45 ವರ್ಷ ನಾನಲ್ಲ, ಸುಮಾರು 63 ತಾಲ್ಲೂಕು ಕೇಂದ್ರಗಳಿಗೆ ಉತ್ತಮವಾದಂಥ ರಸ್ತೆ ಇಲ್ಲವೆಂದು ಹೇಳಿ ಸರ್ಕಾರದ ಒಂದು ಸಂಸ್ಥೆಯಾದ ನಮ್ಮ K-SHIP ನವರು ತಯಾರು ಮಾಡಿದಂಥ ಒಂದು ವರದಿಯಲ್ಲಿದೆ. ಏಕೆಂದರೆ, 45 ವರ್ಷಗಳಾದರೂ ಇನ್ನೂ ನಾವು 63 ತಾಲ್ಲೂಕುಗಳಿಗೆ ಸರಿಯಾದಂಥ, ಉತ್ತಮವಾದಂಥ ರಸ್ತೆಗಳನ್ನು ಕೊಡುವುದಕ್ಕಾಗಿಲ್ಲ. ಅದರ ಬಗ್ಗೆ ಒಂದು ದಿನ detail ಆಗಿ ಬೇಕಾದರೆ ಇಲಾಖೆವೈಸ್ ನಮ್ಮ ಏನು 3054ನಲ್ಲಿ ನಮ್ಮ MDR ರಸ್ತೆ ಇರಬಹುದು, 34 ಸಾವಿರ ಕಿಲೋಮೀಟರ್ ರಸ್ತೆ ಇದೆ. ಮತ್ತೆ ಅದೇ ರೀತಿ, 13 ಸಾವಿರ ಕಿಲೋಮೀಟರ್ ರಾಜ್ಯ ಹೆದ್ದಾರಿ ರಸ್ತೆ ಇದೆ. ಕೇಂದ್ರ ಸರ್ಕಾರದ್ದೂ ರಸ್ತೆ ಇದೆ. ಏಕೆಂದರೆ, ಕೇಂದ್ರ ಸರ್ಕಾರದ ರಸ್ತೆಗಳು ಕೆಲವು ಇವತ್ತು

ಹಾಳಾಗಿವೆ. ನಮ್ಮಲ್ಲೇನಾಗಿದೆ ಎಂದರೆ, ಅವರು ಹಿಂದಿನದಿಟ್ಟು ಲೆಕ್ಕ ಕೊಡುತ್ತಿದ್ದರು. ಆ ರಸ್ತೆಗಳು ಇವತ್ತು ನಮ್ಮ ಏನು Lorry movement ಇದೆ ಅದರಿಂದ ಆ ರಸ್ತೆಯೂ ಅಂದರೆ ಇವತ್ತು National Highway ನೂ ತಡೆಯುತ್ತಿಲ್ಲ. ಏಕೆಂದರೆ, ಉದಾಹರಣೆಗೆ ಹೇಳುವುದಾದರೆ, ನಮ್ಮಲ್ಲೇ ಈಗ ಚಿಕ್ಕನಾಯಕನಹಳ್ಳಿಯಿಂದ ಹಾಸನಕ್ಕೆ ಒಂದು ದಿನಕ್ಕೆ 2400 ಲಾರಿ ಬರುತ್ತಿವೆ. ಒಂದು ದಿನಕ್ಕೆ 40 ಟನ್, 50 ಟನ್ ಹಾಕುವ ಲಾರಿ 2400 vehicle ಬರುತ್ತಿವೆ. ಅಲ್ಲಿ ಕಳೆದ 10 ವರ್ಷಗಳ ಹಿಂದೆ ಎಷ್ಟಿತ್ತು? 50 ಗಾಡಿಗಳು ಹೋಗುತ್ತಿದ್ದವು. ಇವತ್ತು 2550 vehicle ಗಳು ಬರುತ್ತಿರುವುದರಿಂದ ಎಲ್ಲೆಲ್ಲಿ, ಎಷ್ಟೆಟ್ಟು ರಸ್ತೆಗಳ ಗುಣಮಟ್ಟವನ್ನು ನಾವು ಕಾಪಾಡ ಬೇಕಾಗುತ್ತದೆ ಅದನ್ನು ನಾವು ಮಾಡಬೇಕಾಗುತ್ತದೆ. ಬೆಂಗಳೂರು ಸುತ್ತಮುತ್ತ 534 ಕೋಟಿ ರೂಪಾಯಿ ಕೊಡುತ್ತೇವೆಂದು ಹಿಂದಿನ ನಮ್ಮ Telecommunication Minister ಹೇಳಿದರು. ಪತ್ರ ವ್ಯವಹಾರ ಎಲ್ಲಾ ಮಾಡಿದೆವು. ಆಗಲಿಲ್ಲ ಇವತ್ತು ತಾವೆಲ್ಲಾ ಸೇರಿ ಒಂದು ದಿನ ಸುಮ್ಮನೆ ಚರ್ಚೆ ಮಾಡುವುದಕ್ಕಿಂತ ಹೆಚ್ಚಾಗಿ ಇದಕ್ಕೆ ಒಂದು ಸ್ವಲ್ಪ ನಾನು ಪಣಕಾಸಿನ ಮಂತ್ರಿಗಳಿಗೂ ಮನವಿ ಮಾಡುವುದು ಇಷ್ಟೇ ಇದಕ್ಕೆ 150 ಕೋಟಿ ರೂಪಾಯಿಗಳಾದರೆ ಆಗುವುದಿಲ್ಲ. ಕನಿಷ್ಟ 500 ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ನಾವು ಕೆಲಸ ಮಾಡಬಹುದು ಎಂದು ನಾನು ಸಭಾಧ್ಯಕ್ಷರ ಮೂಲಕ ಅವರ ಗಮನಕ್ಕೆ ತರುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ನನ್ನ ಒಂದು ಗಮನ ಸೆಳೆಯುವಂಥ ಸೂಚನೆಯಲ್ಲಿ ನನಗೆ ಯಾವುದೇ ಒಂದು ಪರಿಹಾರ ಸಿಕ್ಕಿಲ್ಲ. ಮಂತ್ರಿಗಳು ಒಂದು ಸಾರಿ ಪ್ರವಾಸ ಮಾಡಿದರೆ ಸಾಕು. ನಾನಿಷ್ಟೇ ಕೇಳುವುದು, ಅಲ್ಲಿಯ ಪರಿಸ್ಥಿತಿಯ ಅವಲೋಕನ ಮಾಡಬೇಕೆಂದರೆ, ಕಳೆದ ಎರಡು ವರ್ಷಗಳಿಂದ ನಾನು ಅನುಭವಿಸಿದ ಮಾನಸಿಕ ಯಾತನೆಯನ್ನು ತಾವು ನಿಜವಾಗಲೂ ಮನಗಾಣಬೇಕಾದರೆ ಒಂದು ಬಾರಿ ತಾವು ಅಧಿಕಾರಿಗಳ ಜೊತೆ ಪ್ರವಾಸವನ್ನು ಮಾಡಿ. ಅರ್ಧ ದಿನ ಪ್ರವಾಸ ಮಾಡಿ. ಅಷ್ಟು ಮಾತ್ರ ಸಾಕು ಸಾರ್. ದಯವಿಟ್ಟು ಇದನ್ನು ನಾನು ನಿರೀಕ್ಷೆ ಮಾಡುತ್ತಿದ್ದೇನೆ. ತಮ್ಮ ಮೂಲಕ ನಾನು ಮಂತ್ರಿಗಳನ್ನು ಕೇಳುತ್ತಿದ್ದೇನೆ, ಅವರು ಒಂದು ದಿನ ಪ್ರವಾಸವನ್ನು ಮಾಡಬೇಕು. ತಾವು ಭರವಸೆ ಕೊಟ್ಟರೆ ಅಷ್ಟೇ ಸಾಕು. ತಾವು ಬಂದರೆ ಕಾರ್ಯಚಟುವಟಿಕೆ ಪ್ರಾರಂಭವಾಗುತ್ತದೆ. ಏಕೆಂದರೆ, ನಿಷ್ಕ್ರಿಯರಾದಂಥ ಅಧಿಕಾರಿಗಳ ಮೇಲೆ ತಾವು ಕ್ರಮ ಕೈಗೊಳ್ಳಬೇಕು. ತಾವು ಖಂಡಿತವಾಗಿಯೂ ನನ್ನ ಕ್ಷೇತ್ರಕ್ಕೆ ಬರಬೇಕು.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ತಾವು ಸಮಯ ಕೊಡಬೇಕು.

ಶ್ರೀ ಬಿ.ಆರ್. ಪಾಟೀಲ್ : ಈ road maintenance, comtractors ವಿಷಯಕ್ಕೋಸ್ಕರ ನಾನೇ ಜಿಲ್ಲಾಧಿಕಾರಿ ಕಛೇರಿ ಎದುರುಗಡೆ ಧರಣಿ ಕೂರಬೇಕಾಗಿತ್ತು. ಒಂದು ದಿವಸ ಇಡೀ ಬಿಸಿಲಿನಲ್ಲಿ ರಸ್ತಾರೋಕೋ ಮಾಡಬೇಕಾಗಿತ್ತು. ಮಾನ್ಯ PWD ಸಚಿವರು ಬಹಳ ಆಸಕ್ತಿ ಇಟ್ಟು ಏನಾದರೂ ಮಾಡಬೇಕೆಂದು ಹೊರಟ್ಟಿದ್ದಾರೆ. ಪಣಕಾಸಿನ ನೆರವನ್ನೂ ಹೆಚ್ಚು

ಕೇಳಿದ್ದಾರೆ. ನಾವೆಲ್ಲಾ ಅವರ ಬೆಂಬಲಕ್ಕೆ ನಿಂತಿದ್ದೇವೆ. ನಿಮ್ಮ ಕಾಳಜಿಯನ್ನೂ ಕೂಡ ನಾನು ಅರ್ಥ ಮಾಡಿಕೊಂಡಿದ್ದೇನೆ. ವಾಸ್ತವಿಕ ಪರಿಸ್ಥಿತಿಯನ್ನು ಒಪ್ಪಿದ್ದೀರಿ. ಆದರೆ, contractors ಅನ್ನು ನೀವು ಮಣಿಸುವುದಕ್ಕೆ ಆಗುವುದಿಲ್ಲವೇ? ಈಗ ರಾಜ್ಯ ಹೆದ್ದಾರಿ 10, ಅದು 5 ವಿಧಾನಸಭಾ ಕ್ಷೇತ್ರಗಳನ್ನು ಹೌದು ಮಹಾರಾಷ್ಟ್ರಕ್ಕೆ ಹೋಗುತ್ತದೆ. ನಮ್ಮ ಜಿಲ್ಲೆಯಲ್ಲಿ 8 cement factory ಇದ್ದು, ಅಲ್ಲಿಂದ ಎಲ್ಲ cement ಹೋಗಬೇಕು. ತೊಗರಿ ಬೇಳೆ ಅಲ್ಲಿಂದ ಹೋಗಬೇಕು. ಇದು ವ್ಯಾಪಾರೋದ್ಯಮಕ್ಕೆ ಹೆಚ್ಚು ಪೂರಕವಾಗಿರುವಂಥ ರಸ್ತೆ. ಈ contractor ಹಿಂದೆ ಬೇರೆ ಕಂಪನಿ ಹೆಸರಿನ ಮೇಲೆ ಹಿಡಿದುಬಿಟ್ಟು ಇವತ್ತು ಮತ್ತು ಬೇರೆ ಕಂಪನಿ ಬೇನಾಮಿ. ಅವನು ಹಿಂದೆಯೂ ಕೂಡ ಲೂಟಿ ಮಾಡಿ ಹೋಗಿದ್ದಾನೆ. ಇವತ್ತು ಕೂಡ ಲೂಟಿ ಮಾಡುವುದಕ್ಕೆ ಬಂದು ಮತ್ತೆ contract ಹಿಡಿದ್ದಿದ್ದಾನೆ ಇವತ್ತು ಎಂ.ವೈ. ಪಾಟೀಲರು ಇಲ್ಲ. ಅವರೇ ಮೊನ್ನೆ ಹೋಗಿ ನಿಮ್ಮ PWD ಕಛೇರಿಗೆ ಬೀಗ ಹಾಕಿಸಬೇಕಾಯಿತು. ನಾನೊಬ್ಬ ಶಾಸಕನಾಗಿ ಜಿಲ್ಲಾಧಿಕಾರಿ ಕಛೇರಿ ಎದುರುಗಡೆ ಧರಣಿ ಕೂರಬೇಕಾಯಿತು ರಸ್ತಾರೋಕೋ ಮಾಡಬೇಕಾಯಿತು. ಇಷ್ಟಾದರೂ ಕೂಡ ಆ contractor ಮಣಿದಿಲ್ಲ ಅಂದರೆ ಎಷ್ಟು contractor ಗಳು ಗಟ್ಟಿಯಾಗಿದ್ದಾರೆ ಎಂಬುದನ್ನು ನೋಡಬಹುದು. ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ, ಅವರನ್ನು blacklist ಮಾಡಿ. ಸಾಧ್ಯವಾದರೆ criminal case. ಹಾಕಿ, ಇಲ್ಲದಿದ್ದರೆ contractor ಗಳನ್ನು ನೀವು ಮಟ್ಟ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಈ Contractor lobby ಬಹಳ ಬೆಳೆಯುತ್ತಿದೆ. ರಾಜ್ಯ ಹೆದ್ದಾರಿಗೆ ನೀವು 3 ಲಕ್ಷ ರೂಪಾಯಿಗಳನ್ನು maintenance ಗೋಸ್ಕರ ಕೊಡುತ್ತೀರಿ. 3 ಲಕ್ಷ ರೂಪಾಯಿ ಸಾಕಾಗುವುದಿಲ್ಲ. ಏಕೆಂದರೆ, ಅವರು tender ಹಾಕುವಾಗ 10 ತಗ್ಗುಗಳು ಇದ್ದರೆ, ಒಂದು ವರ್ಷದ ನಂತರ ಈಗ 50 ತಗ್ಗುಗಳಾಗಿವೆ. ಅದನ್ನು ಕೂಡ ನಾವು ಅರ್ಥ ಮಾಡಿಕೊಂಡು ಇದಕ್ಕೇನಾದರೂ ಮಾಡಿ ಪರಿಹಾರ ಕಂಡುಹಿಡಿದು ಬಿಡುಗಡೆಗೊಳಿಸುವುದಕ್ಕೆ ದಾರಿ ಮಾಡಿಕೊಡಬೇಕೆಂದು ನಾನೂ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ದಯವಿಟ್ಟು ಅವರು ಉತ್ತರ ಹೇಲಲಿ ಸಾರ್. ಈಗ ಪ್ರಶ್ನೆ ಕೇಳಿದವನು ನಾನು. ಸಾಲಗಾರ ಸುಮ್ಮನಿದ್ದರೂ ಸಾಕ್ಷಿದಾರರು ಸುಮ್ಮನಿರುವುದಿಲ್ಲವಂತೆ. ಹಾಗಾಯಿತು. ನಿಮ್ಮ ನೋವು ನನಗೆ ಅರ್ಥವಾಗುತ್ತದೆ. ಆದರೆ, ನಾವು ಒಂದು ನ್ಯಾಯ ಕೇಳಿದಾಗ ನೀವೂ ನ್ಯಾಯ ಕೇಳಿ ಬೇಡವೆಂದು ಹೇಳುವುದಿಲ್ಲ. ನೀವು ಕೇಳುವುದು ತಪ್ಪು ಎಂದು ಹೇಳುವುದಿಲ್ಲ.

ಶ್ರೀ ಸಿ.ಎಸ್. ಪುಟ್ಟೇಗೌಡ : ಅವರು ಹೇಳಿದ್ದೇ ಹೇಳುತ್ತಾರೆ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ನಮ್ಮನ್ನೂ ಮಾತನಾಡಿ ಎಂದು ಶಾಸನ ಸಭೆಗೆ ನಮ್ಮನ್ನು ಕಳುಹಿಸಿಲ್ಲವೇ?

(ಗೊಂದಲ)

ಉಪಾಧ್ಯಕ್ಷರು : ಈಗ ಪುಟ್ಟೇಗೌಡರೇ ಮಾತನಾಡಿ;

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಈಗ ಮೈಸೂರಿನಲ್ಲಿರತಕ್ಕಂಥ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ....

ಉಪಾಧ್ಯಕ್ಷರು : ಪುಟ್ಟೇಗೌಡರೆ, ಇದಕ್ಕೆ ಅವರದು ಉತ್ತರ ಸಿಗಲಿಲ್ಲ, ಒಂದು ನಿಮಿಷ ಅವರು ಮುಗಿಸಿ ಬಿಡಲಿ.

ಶ್ರೀ ಹೆಚ್. ಎಂ. ರೇವಣ್ಣ (ಲೋಕೋಪಯೋಗಿ ಇಲಾಖೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಸವರಾಜ್‌ರವರು ಪ್ರಸ್ತಾಪ ಮಾಡಿ, ಅಲ್ಲಿ ಕೆಲವು ಕೆಲಸಗಳು ಸರಿಯಾಗಿ ನಡೆದಿಲ್ಲ ಮತ್ತೆ ಕೆಲವು ಕಾಮಗಾರಿಗಳಲ್ಲಿ ಲೋಕೋದೋಷಗಳಿವೆ ಎನ್ನತಕ್ಕಂಥದ್ದನ್ನು ಈ ಸಭೆಯ ಮೂಲಕ ಮಾನ್ಯ ಸದಸ್ಯರು ನನ್ನ ಗಮಾನಕ್ಕೆ ತಂದಿದ್ದಾರೆ. ಆದ್ದರಿಂದ, ಯಾವ ರಸ್ತೆಗಳು ಮತ್ತು ಯಾವ್ಯಾವ ಗುತ್ತಿಗೆದಾರರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದರ ಬಗ್ಗೆ ಒಂದು ಪತ್ರವನ್ನು ಕೊಟ್ಟರೆ ಅದರ ಬಗ್ಗೆ ಯಾವ ರೀತಿಯಾದ ತನಿಖೆ ಮಾಡಿ ಸಂಬಂಧಪಟ್ಟಂಥ ಗುತ್ತಿಗೆದಾರನ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಇವತ್ತಿನ ದಿವಸ ಸ್ಟೇಟ್ ಹೈವೇ ಕೆಲಸದ ಬಗ್ಗೆ ಹೇಳುವುದಾದರೆ, ರಸ್ತೆಗೆ ಉಪಯೋಗ ಮಾಡುವ ಟಾರ್ ಮೊದಲು 13 ಸಾವಿರ ರೂಪಾಯಿ ಇದ್ದಂಥದ್ದು ಇವತ್ತಿನ ದಿವಸ 26 ಸಾವಿರ ರೂಪಾಯಿ ಅಂದರೆ ಎರಡುಪಟ್ಟು ಜಾಸ್ತಿಯಾಗಿದೆ. ಇದರ ಬಗ್ಗೆ ಡೀಟೆಲ್ ಆಗಿ ಚರ್ಚೆ ಮಾಡಬೇಕೆಂದು ಈಗಾಗಲೇ ಈ ಸಭೆ ತೀರ್ಮಾನ ಮಾಡಿದೆ. ಇದರ ಬಗ್ಗೆ ಆ ಸಂದರ್ಭದಲ್ಲಿ ಚರ್ಚೆ ಮಾಡೋಣ. ಆದರೆ, ಇವತ್ತಿನದಿವಸ ಕೆಲವು ಗುತ್ತಿಗೆದಾರರ ಪರಿಸ್ಥಿತಿಯನ್ನೂ ಸಹ ನೋಡಬೇಕಾಗುತ್ತದೆ. ಮತ್ತೆ ಮಾನ್ಯ ಬಿ.ಆರ್. ಪಾಟೀಲ್ ರವರು ಮಾತನಾಡುತ್ತಾ ಯಾರೋಬ್ಬ ಗುತ್ತಿಗೆದಾರನ್ನು ಸರಿಯಾಗಿಲ್ಲ ಎಂದು ಈಗಾಗಲೇ ಹೇಳಿದರು. ಆದ್ದರಿಂದ ಅವರ ಬಗ್ಗೆ ಮಾಹಿತಿ ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ. ಇಂಥ ವಿಷಯದಲ್ಲಿ ನಾವು ಯಾವತ್ತೂ ಕೂಡ ಹಿಂಜರಿಯ ಬೇಕಾದ ಪ್ರಶ್ನೆ ಇಲ್ಲ. ಮತ್ತೆ ರಸ್ತೆ ವೀಕ್ಷಣೆಗೋಸ್ಕರ ಪ್ರವಾಸ ಕೂಡ ಮಾಡುತ್ತೇನೆ. ಜೊತೆಗೆ ಯಾವ ಗುತ್ತಿಗೆದಾರರು ಸರಿಯಾಗಿ ಕೆಲಸ ಮಾಡಿಲ್ಲವೆಂದು ಮಾಹಿತಿ ಕೊಟ್ಟರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಧ್ರುವನಾರಾಯಣರ್‌ರವರೆ, ನೀವು ಕೊಟ್ಟಿರುವಂಥ ಗಮನ ಸೆಳೆಯುವ ಸೂಚನೆಗೆ ಇನ್ನೂ ಟೈಮ್ ಬೇಕೆಂದು ಮಾನ್ಯ ಮಂತ್ರಿಗಳು ಕೇಳಿದ್ದಾರೆ. ಆದ್ದರಿಂದ, ಇದನ್ನು ನಾಳೆ ತೆಗೆದುಕೊಳ್ಳುತ್ತೇನೆ.